ಸಂಪುಟ: 21, ಸಂಚಿಕೆ: 139, ಪುಟಗಳು: 8, ಮಂಗಳವಾರ, 27 ಫೆಬ್ರವರಿ 2024 RNI NO. KARKAN/2002/08054
epaper: www.sanjemugilu.com



ವೇಣು ಸಾರಥ್ಯದಲ್ಲಿ...

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ

**ಸುಭಾಷಿತ**

ಸ್ವಲ್ಪ ಉಳ್ಳವನು ಬಡವನಲ್ಲ;
ಇನ್ನೂ ಬೇಕೆನ್ನುವವನು ಬಡವ

। ಸೆನೇಕಾ

**ಪಂಚಾಂಗ**

(ಮಂಗಳವಾರ 27, ಫೆಬ್ರವರಿ -2024)

- ಸಂವತ್ಸರ- ಶೋಭಕೃತ್, ಋತು-ಶಿಶಿರ
- ಅಯನ-ಉತ್ತರಾಯಣ, ಮಾಸ- ಮಾಘ
- ಪಕ್ಷ- ಕೃಷ್ಣ, ತಿಥಿ- ಸಪ್ತಮಿ
- ನಕ್ಷತ್ರ- ಹುಬ್ಬಾ
- ರಾಹುಕಾಲ: 03 : 30 PM -04 : 59 PM
- ಗುಳಿಕಕಾಲ: 12 : 32 PM - 02 : 01 PM
- ಯಮಗಂಡಕಾಲ: 09 : 34 AM - 11 : 03 AM

## ಪಾವಗಡ, ಕಲಬುರಗಿಯಲ್ಲಿ ಗ್ರೀನ್ ಹೈಡ್ರೋಜನ್ ಸ್ಥಾವರ ಸ್ಥಾಪನೆ

**ಬೆಂಗಳೂರು:** ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ವಿದ್ಯುತ್ ಉತ್ಪಾದನೆ ಹೆಚ್ಚು ಒತ್ತು ನೀಡುವುದು. ಇದರ ಭಾಗವಾಗಿ ಖಾಸಗಿ ಬಂಡವಾಳವನ್ನು ಆಕರ್ಷಿಸಲು 300 ಕಿಲೋ ವ್ಯಾಟ್ ಸಾಮರ್ಥ್ಯದ ಗ್ರೀನ್ ಹೈಡೋಜನ್ ಸ್ಥಾವರವನ್ನು ಪ್ರಾಯೋಗಿಕವಾಗಿ ಅಂದಾಜು 10 ಕೋಟಿ ರೂ. ವೆಚ್ಚದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಲಿಮಿಟೆಡ್ ಅನುಷ್ಠಾನಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2023-24ನೇ ಸಾಲಿನ ಬಜೆಟ್ ನಲ್ಲಿ ಘೋಷಿಸಿದ್ದರು. ಅದರಂತೆ ಇದೀಗ ಕೆಆರ್ ಇಡಿಎಲ್ ರಾಜ್ಯದಲ್ಲಿ 300 ಕಿಲೋ ವ್ಯಾಟ್ ಗ್ರೀನ್ ಹೈಡ್ರೋಜನ್ ಸ್ಥಾವರವನ್ನು ಸ್ಥಾಪಿಸಲು ನಿರ್ಧರಿಸಿದೆ.

ಇಂಧನ ಸಚಿವಾಲಯದ ನಿಧಿಯನ್ನು ಬಳಸಿಕೊಂಡು 10 ರೂ. ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಪ್ರಾಯೋಗಿಕ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗುವುದು. ಪಾವಗಡ ಮತ್ತು ಕಲಬುರಗಿಯನ್ನು ಯೋಜನೆಗೆ ಸ್ಥಳ ಗುರುತಿಸಲಾಗಿದೆ. ಜೊತೆಗೆ ನೀರು, ನೀರಿನ ಸಂಸ್ಕರಣಾ ಘಟಕ, ಎಲೆಕ್ಟ್ರೋಲೈಸರ್ ಯಂತ್ರ



ಮತ್ತು ಟ್ಯಾಂಕರ್, ಸ್ಥಾವರಕ್ಕೆ ಸೌರ ಅಥವಾ ಗಾಳಿಯಂತಹ ಹಸಿರು ಶಕ್ತಿಯ ಮೂಲವೂ ಬೇಕಾಗುತ್ತದೆ ಎಂದು ಕೆಆರ್ ಇಡಿಎಲ್ ನ ಅಧಿಕಾರಿಗಳು ಹೇಳಿದ್ದಾರೆ.

ಗ್ರೀನ್ ಹೈಡ್ರೋಜನ್ ಇಂಗಾಲದ ಡೈಆಕ್ಸೈಡ್ ಹೊರಸೂಸುವುದಿಲ್ಲ. ಮತ್ತು ಅದಕ್ಕೆ ನೋಡಲ್ ಏಜೆನ್ಸಿಯಾಗಿ, ನಾವು ಆ ಪ್ರಯೋಜನಗಳನ್ನು ಪ್ರದರ್ಶಿಸಬೇಕು. ಆರಂಭದಲ್ಲಿ, ಬೆಂಗಳೂರಿನಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳಿಂದ ಗ್ರೀನ್ ಹೈಡ್ರೋಜನ್ ಖರೀದಿಸಲು ಬಯಸುವ ಗ್ರಾಹಕರೊಂದಿಗೆ ನಾವು ಒಪ್ಪಂದ ಮಾಡಿಕೊಳ್ಳುತ್ತೇವೆ ಎಂದು ಕೆಆರ್‌ಇಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ತಿಳಿಸಿದರು.

ಪ್ರಸ್ತುತ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವ ಮತ್ತು ಮಂಡಳಿಯ ಅನುಮೋದನೆ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿರುವ ಕಾರಣ ಯೋಜನೆಯು ಆರು ತಿಂಗಳಲ್ಲಿ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ. ಕರ್ನಾಟಕದಲ್ಲಿ ಗ್ರೀನ್ ಹೈಡ್ರೋಜನ್‌ಗೆ ಬೇಡಿಕೆ ಹೆಚ್ಚಾಗಿದೆ ಎಂದರು.

ಪುಟ 2

## ಸಂಕ್ಷಿಪ್ತ ಸುದ್ದಿ

### ಕರ್ನಾಟಕದಲ್ಲಿ ಶಿಶು ಮರಣ ಪ್ರಮಾಣ: ಆರೋಗ್ಯ ಇಲಾಖೆ ಕೊಟ್ಟ ಸಿಹಿ ಸುದ್ದಿ



**ಬೆಂಗಳೂರು:** ಕರ್ನಾಟಕದಲ್ಲಿ ಶಿಶು ಮರಣ ಪ್ರಮಾಣದಲ್ಲಿ ನಾಲ್ಕು ವರ್ಷಗಳ ಇಳಿಕೆ ಕಂಡುಬಂದಿರುವುದು ಅಂಕಿಅಂಶಗಳಿಂದ ತಿಳಿದುಬಂದಿದೆ. ರಾಜ್ಯ ಆರೋಗ್ಯ ಇಲಾಖೆ ಕೈಗೊಂಡಿರುವ ಹಲವು ಉಪಕ್ರಮಗಳ ಹಿನ್ನೆಲೆಯಲ್ಲಿ 2023ರ ಏಪ್ರಿಲ್ 1ರಿಂದ ಈ ವರ್ಷದ ಜನವರಿ 31ರವರೆಗೆ 10 ತಿಂಗಳ ಅವಧಿಯಲ್ಲಿ 4,546 ಮಂದಿ ಶಿಶು ಮರಣ ಪ್ರಕರಣಗಳು ವರದಿಯಾಗಿವೆ. ಇದು ಕಳೆದ ನಾಲ್ಕು ವರ್ಷಗಳಲ್ಲೇ ಕನಿಷ್ಠ ಶಿಶು ಮರಣವಾಗಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಮಾಧ್ಯಮ ವರದಿಯೊಂದು ತಿಳಿಸಿದೆ.

ಪುಟ 2

### ಚುನಾವಣೆ ಹೊಸ್ತಿಲಲ್ಲೇ ಸಂಸದೆ ಸುಮಲತಾಗೆ ಶುಭ ಸೂಚನೆ



**ಮಂಡ್ಯ:** ಲೋಕಸಭಾ ಚುನಾವಣೆ ಹೊಸ್ತಿಲಲ್ಲಿಯೇ ಸಂಸದೆ ಸುಮಲತಾಗೆ ಶಕ್ತಿ ದೇವಿಯಿಂದ ಶುಭ ಸೂಚನೆ ಸಿಕ್ಕಿದೆ. ಶ್ರೀರಂಗಪಟ್ಟಣದ ಗಂಜಾಂನಲ್ಲಿರುವ ನಿಮಿಷಾಂಬ ದೇಗುಲದಲ್ಲಿ ಸುಮಲತಾ ಅಂಬರೀಶ್ ಅವರು ದೇವಿ ದರ್ಶನ ಪಡೆದು ಪೂಜೆ ಸಲ್ಲಿಸಿದ್ದಾರೆ. ಪೂಜೆ ಸಲ್ಲಿಸುತ್ತಿರುವಾಗ ದೇವಿಯು ಬಲಭಾಗದಲ್ಲಿ ಹೂ ನೀಡುವ ಮೂಲಕ ಶುಭ ಸೂಚನೆ ನೀಡಿದ್ದಾಳೆ. ದೇವಿ ಬಲಗಡೆ ಹೂ ನೀಡಿದ್ರೆ ಯಶಸ್ಸು ಸಿಗುತ್ತದೆ ಎಂಬ ನಂಬಿಕೆ ಇದೆ. ಇದರಿಂದ ಲೋಕಸಭಾ ಚುನಾವಣೆಯಲ್ಲಿ ಒಳಿತಾಗಬಹುದು ಎಂಬ ಚರ್ಚೆ ನಡೆಯುತ್ತಿದೆ. ದೇವಿಯ ಶುಭ ಸೂಚನೆಯಿಂದ ಸುಮಲತಾ ಸಂತಸಗೊಂಡಿದ್ದಾರೆ.

ಪುಟ 2

## ಇಂದು ರಾಜ್ಯಸಭೆ ಚುನಾವಣೆ; ರೆಸಾರ್ಟ್‌ನಲ್ಲಿ 'ಕೈ' ಶಾಸಕರು!

# ಶಾಕ್ ಕೊಡ್ತಾರಾ ಡಿಕೆಶಿ?

**ಬೆಂಗಳೂರು:** ಇಂದು 15 ರಾಜ್ಯಗಳಲ್ಲಿ ರಾಜ್ಯಸಭೆಯ ಚುನಾವಣೆ ನಡೆಯಲಿದೆ. 15 ರಾಜ್ಯಗಳಿಂದ ಖಾಲಿ ಇರುವ 56 ಸ್ಥಾನಗಳಿಗೆ ಇಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ. ಉತ್ತರ ಪ್ರದೇಶದಿಂದ 10 ಸ್ಥಾನಗಳು, ಮಹಾರಾಷ್ಟ್ರ ಮತ್ತು ಬಿಹಾರದಿಂದ ತಲಾ 6 ಸ್ಥಾನಗಳು, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶದಿಂದ ತಲಾ 5 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.



ಉಳಿದಂತೆ ಗುಜರಾತ್ ಮತ್ತು ಕರ್ನಾಟಕದಿಂದ ತಲಾ 4 ಸ್ಥಾನಗಳು, ಆಂಧ್ರಪ್ರದೇಶ, ತೆಲಂಗಾಣ, ರಾಜಸ್ಥಾನ ಮತ್ತು ಒಡಿಶಾದಿಂದ ತಲಾ 3 ಸ್ಥಾನಗಳು ಹಾಗೇ ಉತ್ತರಾಖಂಡ, ಛತ್ತೀಸ್‌ಗಢ, ಹರಿಯಾಣ ಮತ್ತು ಹಿಮಾಚಲ ಪ್ರದೇಶದಲ್ಲಿ ತಲಾ ಒಂದು ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಆಯಾ ರಾಜ್ಯಗಳ ವಿಧಾನಸಭೆ ಸದಸ್ಯರು ಇಂದು ಮತದಾನ ಚಲಾಯಿಸಲಿದ್ದಾರೆ.

**ರಾಜ್ಯದಲ್ಲಿ 4 ಸ್ಥಾನಗಳಿಗೆ ಚುನಾವಣೆ:** ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ 4 ಸ್ಥಾನಗಳಿಗೆ ಇಂದು ಚುನಾವಣೆ ನಡೆಯಲಿದೆ. ವಿಧಾನಸೌಧದ ಕೊಠಡಿ ಸಂಖ್ಯೆ 106ರಲ್ಲಿ ಮತದಾನಕ್ಕೆ ಸಿದ್ಧತೆ ಮಾಡಲಾಗಿದೆ. ಬೆಳಗ್ಗೆ 9 ಗಂಟೆಯಿಂದ ಸಂಜೆ 4ರವರೆಗೆ ಮತದಾನಕ್ಕೆ ಅವಕಾಶವಿದೆ. ಮತದಾನ ಮುಗಿದ ಬಳಿಕ ಸಂಜೆ 4 ಗಂಟೆಯಿಂದಲೇ ಮತ ಎಣಿಕೆ ಶುರುವಾಗಲಿದ್ದು, ಸಂಜೆ 6 ಗಂಟೆ ಹೊತ್ತಿಗೆ ಫಲಿತಾಂಶ ಹೊರಬೀಳಲಿದೆ.

ಕಾಂಗ್ರೆಸ್‌ನಿಂದ ಅಜಯ್ ಮಾಕನ್, ಸಯ್ಯದ್ ನಾಸೀರ್ ಹುಸೇನ್ ಮತ್ತು ಜಿ. ಸಿ. ಚಂದ್ರಶೇಖರ್ ಕಣದಲ್ಲಿದ್ದಾರೆ. ಬಿಜೆಪಿ ನಾರಾಯಣಸಾ ಬಾಂಡಗೆ ಅವರನ್ನು ಅಖಾಡಕ್ಕಿಳಿಸಿದೆ. ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಕುಪೇಂದ್ರ ರೆಡ್ಡಿ ಕಣಕ್ಕಿಳಿದಿದ್ದಾರೆ.

ಪುಟ 2

### ಜೆಡಿಎಸ್‌ಗೆ ಕೋಲಾರ ಲೋಕಸಭಾ ಕ್ಷೇತ್ರ?

## ಎಂಪಿ ಟಿಕೆಟ್ ಸಮೃದ್ಧಿಗಾ- ಮುನಿಸ್ವಾಮಿಗಾ?

**ಕೋಲಾರ:** ಚಿನ್ನದ ನಾಡು ಕೋಲಾರ ಲೋಕಸಭೆ ಚುನಾವಣೆಗೆ ಜೆಡಿಎಸ್ ಗೆ ಬಿಟ್ಟುಕೊಡಲು ಬಿಜೆಪಿ ಬಹುತೇಕ ನಿರ್ಧಾರ ಮಾಡಿದೆ ಎನ್ನಲಾಗಿದೆ. ಬಿಜೆಪಿ ಮತ್ತು ಜೆಡಿಎಸ್‌ನಿಂದ ಈ ಸಲ ಮುಳಬಾಗಿಲು ಶಾಸಕ ಸಮೃದ್ಧಿ ಮಂಜುನಾಥ್ ಹೆಸರು ಕೇಳಿಬರುತ್ತಿದೆ. ಆದರೆ ಹಾಲಿ ಬಿಜೆಪಿ ಸಂಸದ ಮುನಿಸ್ವಾಮಿಯವರು ಕ್ಷೇತ್ರ ಬಿಟ್ಟುಕೊಡಲು ರೆಡಿಯಿಲ್ಲ. ಹೀಗಾಗಿ ಮಾತುಕತೆ ನಡೆಸೋಕೆ ಕುಮಾರಸ್ವಾಮಿ ಅವರು ನಿನ್ನೆ ಕೋಲಾರಕ್ಕೆ ಬಂದಿದ್ದರು. ಆಭರಣ ಮಳಿಗೆ ಉದ್ಘಾಟನೆ ಜೊತೆ ಪ್ರಮುಖರ ಜೊತೆ ಒಂದಷ್ಟು ಚರ್ಚೆಗಳನ್ನೂ ಮಾಡಿದ್ದಾರೆ.



**ಕೋಲಾರ ಟಿಕೆಟ್ ಹಂಚಿಕೆ ಚರ್ಚೆ ಆಗ್ತಿದೆ:** ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಂದ ಎನ್‌ಡಿಎ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿ ಈ ಬಾರಿ ಗೆಲ್ಲಲೇಬೇಕು ಅಂತ ನಿರ್ಧಾರ ಮಾಡಿದ್ದೇವೆ.

ಪುಟ 2

### ಸಂಧಾನ ಬಳಿಕವೂ ಶಮನವಾಗದ ಸುಮಲತಾ-ಸಚ್ಚಿದಾನಂದ

## ನಡುವಿನ ಮುನಿಸು!

**ಮಂಡ್ಯ:** ಸಕ್ಕರೆ ನಾಡಿನ ಲೋಕಸಭಾ ಅಖಾಡ ರಂಗೇರಿದೆ. ಅಂದು 2019ರ ಲೋಕಸಭಾ ಚುನಾವಣೆ ವೇಳೆ ಸುಮಲತಾ-ನಿಖಿಲ್ ಕುಮಾರಸ್ವಾಮಿ ಮಧ್ಯೆ ಲೋಕ ಯುದ್ಧ ಜೋರಾಗಿ ನಡೆದಿತ್ತು. ನಿಖಿಲ್ ಪರ ಅವರ ತಂದೆ ಆಗಿನ ಸಿಎಂ ಕುಮಾರಸ್ವಾಮಿ, ಮಂತ್ರಿ ಮಂಡಲದ ಮಂತ್ರಿಗಳು ಸೇರಿದಂತೆ ಹಲವು ಘಟಾನುಘಟಿ ನಾಯಕರು ಅಬ್ಬರದ ಪ್ರಚಾರ ಮಾಡಿದ್ದರು. ಇನ್ನೊಂದೆಡೆ ಸುಮಲತಾ ಅಂಬರೀಶ್ ಪರವಾಗಿ ಜೋಡೆತ್ತಿನ ರೀತಿ ಅಬ್ಬರದ ಪ್ರಚಾರ ಮಾಡಿದ್ದು ದರ್ಶನ್ ಮತ್ತು ಯಶ್. ಸುಮಲತಾ ಅಂಬರೀಶ್ ಅವರ ಗೆಲುವಿನ ಹಿಂದೆ ಕೇವಲ ದರ್ಶನ್ ಮತ್ತು ಯಶ್ ಅವರ ಪಾತ್ರದ ಜೊತೆಗೆ ಬ್ಯಾಕ್ ಬೋನ್ ಆಗಿ ಇಂದಿನ ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಕೆಲಸ ಮಾಡಿದ್ರು.





ಇಂಡುವಾಳು ಸಚ್ಚಿದಾನಂದ ಅವರು ಸುಮಲತಾರನ್ನು ಗೆಲ್ಲಿಸಲು ಎಲ್ಲಾ ನಾಯಕರನ್ನು ಒಗ್ಗೂಡಿಸಿ ಚುನಾವಣೆಯ ರಣ ತಂತ್ರವನ್ನು ಹೆಣೆದಿದ್ದರು. ಸುಮಲತಾ ಅವರ ಗೆಲುವಿಗೆ ಈ ಅಂಶವು ಪ್ರಮುಖ ಕಾರಣವಾಗಿತ್ತು. ಇದಾದ ಬಳಿಕ ಸಚ್ಚಿದಾನಂದ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದ್ದರು.

ಪುಟ 2

### ತಾವು ಏನು ಧರಿಸಬೇಕೆಂಬುದನ್ನು ಹೆಣ್ಣುಮಕ್ಕಳೇ ನಿರ್ಧರಿಸಬೇಕು

## ಬೇರೆ ಯಾರೂ ಅಲ್ಲ

**ಉತ್ತರ ಪ್ರದೇಶ:** ''ತಾವು ಏನು ಧರಿಸಬೇಕೆಂಬುದನ್ನು ಹೆಣ್ಣುಮಕ್ಕಳೇ ನಿರ್ಧರಿಸಬೇಕೇ ಹೊರತು ಬೇರೆ ಯಾರೂ ಅಲ್ಲ'' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಉತ್ತರ ಪ್ರದೇಶದಲ್ಲಿ ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ನ ಭಾರತ್ ಜೋಡೋ ನ್ಯಾಯ ಯಾತ್ರೆ ನಡೆಯುತ್ತಿದೆ. ಈ ವೇಳೆ ರಾಹುಲ್ ಅಲಿಗಢ ವಿಶ್ವವಿದ್ಯಾಲಯಕ್ಕೆ ಆಗಮಿಸಿ ವಿದ್ಯಾರ್ಥಿಗಳನ್ನು ಭೇಟಿ ಮಾಡಿದರು.



ವಿದ್ಯಾರ್ಥಿಗಳೊಂದಿಗೆ ಶಿಕ್ಷಣ, ಹಕ್ಕುಗಳು, ಅಭಿವ್ಯಕ್ತಿಯಂತಹ ವಿಷಯಗಳ ಕುರಿತು ಮಾತನಾಡಿದರು. ಈ ವೇಳೆ ವಿದ್ಯಾರ್ಥಿನಿಯೊಬ್ಬರು ರಾಹುಲ್ ಗಾಂಧಿಯವರ ಬಳಿ ''ಮುಂದೆ ನೀವು ದೇಶದ ಪ್ರಧಾನಿಯಾದರೆ ಹೆಣ್ಣುಮಕ್ಕಳು ಹಿಜಾಬ್ ಧರಿಸುವ ಬಗ್ಗೆ ನಿಮ್ಮ ಅಭಿಪ್ರಾಯವೇನು '' ಎಂದು ಪ್ರಶ್ನೆ ಕೇಳಿದ್ದಾರೆ.

ಅದಕ್ಕೆ ರಾಹುಲ್ ಗಾಂಧಿ ಪ್ರತಿಕ್ರಿಯಿಸಿ, ಹೆಣ್ಣುಮಕ್ಕಳು ಏನು ಧರಿಸಬೇಕು ಎಂಬುದನ್ನು ಅವರೇ ನಿರ್ಧರಿಸಬೇಕು ಬೇರೆ ಯಾರೋ ಅಲ್ಲ ಎಂದು ಹೇಳಿದರು.

ರಾಜಕೀಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕುರಿತು ರಾಹುಲ್ ಹೇಳಿದ್ದೇನು ರಾಜಕೀಯ ಹಾಗೂ ವ್ಯಾಪಾರದಲ್ಲಿ ಮಹಿಳೆಯರಿಗೆ ಪೂರ್ಣ ಪ್ರಮಾಣದ ಪ್ರಾತಿನಿಧ್ಯವಿಲ್ಲ. ಇದಕ್ಕಾಗಿ ಎಲ್ಲಾ ರಾಜಕೀಯ ಪಕ್ಷಗಳು ಮಹಿಳಾ ಅಭ್ಯರ್ಥಿಗಳಿಗೆ ಗರಿಷ್ಠ ಅವಕಾಶಗಳನ್ನು ನೀಡಬೇಕು. ಪಕ್ಷಗಳು ಮಹಿಳೆಯರಿಗೆ ಪ್ರೋತ್ಸಾಹ ನೀಡಬೇಕು ಎಂದರು.

ಪುಟ 2

### ಮುಠಾಳ, ಅಯೋಗ್ಯ ಎಂದ ಪ್ರದೀಪ್ ಈಶ್ವರ್ ವಿರುದ್ಧ ಮಾನನಷ್ಟ ಕೇಸ್ ಹಾಕಿದ

## ಪ್ರತಾಪ್ ಸಿಂಹ

**ಬೆಂಗಳೂರು:** ಕಳೆದ ತಿಂಗಳು ಚಿಕ್ಕಬಳ್ಳಾಪುರದ ಅಗಲಗುರ್ಕಿಯಲ್ಲಿ ನಡೆದ ಗ್ರಾ.ಪಂ. ಕಟ್ಟಡ ಶಂಕುಸ್ಥಾಪನಾ ಕಾರ್ಯಕ್ರಮದ ವೇಳೆ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಮೈಸೂರು ಸಂಸದ ಪ್ರತಾಪ್ ಸಿಂಹ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿದ್ದರು. ಈ ಹಿನ್ನೆಲೆ ಪ್ರದೀಪ್ ಈಶ್ವರ್ ವಿರುದ್ಧ ಪ್ರತಾಪ್ ಸಿಂಹ ಮಾನನಷ್ಟ ಮೊಕದ್ದಮೆ ಕೇಸ್ ದಾಖಲಿಸಿದ್ದಾರೆ. ತನ್ನ ವಿರುದ್ಧ ಏಕವಚನದಲ್ಲಿ ಅವಹೇಳನಕಾರಿ ಪದ ಬಳಸಿದ್ದಾರೆ ಎಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನಲ್ಲಿ ಕ್ರಿಮಿನಲ್ ಮಾನನಷ್ಟ ಕೇಸ್ ದಾಖಲಿಸುವಂತೆ ಖಾಸಗಿ ದೂರು ಸಲ್ಲಿಸಿದ್ದಾರೆ.





ಪ್ರತಾಪ್ ಸಿಂಹ ಒಬ್ಬ ದೊಡ್ಡ ಅಯೋಗ್ಯ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಬಾಯಿ ಮುಚ್ಕಂಡು ಸುಮ್ಮನಿದ್ದರೆ ಸರಿ.

## ಕಾಂಗ್ರೆಸ್ ಶಾಸಕರಿಗೆ ಗಾಳ ಹಾಕಿದ್ದೇಗೆ?

**ಬೆಂಗಳೂರು:** ರಾಜ್ಯಸಭೆ ಚುನಾವಣೆಗೆ ಸಕಲ ಸಿದ್ಧತೆ ಮಾಡಿಕೊಂಡಿರುವ ಕಾಂಗ್ರೆಸ್ , ತಂತ್ರಗಾರಿಕೆ ರೂಪಿಸುವ ನಿಟ್ಟಿನಲ್ಲಿ ಸೋಮವಾರ ರಾತ್ರಿ ಶಾಸಕಾಂಗ ಪಕ್ಷದ ಸಭೆ ನಡೆಸಿತ್ತು. ಈ ಸಂದರ್ಭದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಆಸಕ್ತಿದಾಯಕ ವಿಚಾರವನ್ನು ಬಹಿರಂಗಪಡಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಶಾಸಕರಿಗೆ ಜೆಡಿಎಸ್ ನಾಯಕ ಹೆಚ್ ಡಿ ಕುಮಾರಸ್ವಾಮಿ ಮತ್ತು ಬಿಜೆಪಿಯ ಹಿರಿಯ ನಾಯಕ, ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಗಾಳ ಹಾಕಿರುವ ವಿಚಾರವಾಗಿ ಮಾಹಿತಿ ನೀಡಿದ್ದಾರೆ.



'ನಮ್ಮ ಸುಮಾರು 41 ಶಾಸಕರಿಗೆ ಅವರು (ಬಿಜೆಪಿ, ಜೆಡಿಎಸ್) ಗಾಳ ಹಾಕಿದ್ದಾರೆ. ಎಲ್ಲರಿಗೂ ಕರೆ ಮಾಡಿ ಆಮಿಷ ಒಡ್ಡಿದ್ದಾರೆ. ಕುಮಾರಸ್ವಾಮಿ ಅವರೇ ಖುದ್ದು ದೂರವಾಣಿ ಮೂಲಕ ಕರೆ ಮಾಡಿ ಮಾತನಾಡಿದ್ದಾರೆ. ಅಂಥಾ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರನ್ನೇ ಬಿಟ್ಟಿಲ್ಲ. ಕುಮಾರಸ್ವಾಮಿ ಅವರು ಫೋನ್ ಮಾಡಿ ಮಾತನಾಡಿದ್ದಾರೆ. ಬಿಜೆಪಿಯಿಂದ ಸ್ವತಃ ಬಿಎಸ್ ಯಡಿಯೂರಪ್ಪ ಸಹ ಮಾತನಾಡಿದ್ದಾರೆ' ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ.

ಅವರು ಎಷ್ಟರ ಮಟ್ಟಿಗೆ ನಮ್ಮ ಶಾಸಕರನ್ನು ಸೆಳೆಯುವ ಪ್ರಯತ್ನ ಮಾಡಿದ್ದಾರೆ ನೋಡಿ, ನಮ್ಮ ಶಾಸಕರು 50 ಕೋಟಿ ರೂಪಾಯಿ ಕೊಡುತ್ತೇನೆ ಎಂದು ಆಮಿಷವೊಡ್ಡಿದರೂ ಅವರಿಗೆ ಓಟ್ ಹಾಕಲ್ಲ ಎಂದು ಶಾಸಕಾಂಗ ಪಕ್ಷದ ಸಭೆಯಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ.

**ಬಿಜೆಪಿ ಶಾಸಕರ ಸಂಪರ್ಕಿಸಲು ಕಾಂಗ್ರೆಸ್ ಯತ್ನ:** ಮತ್ತೊಂದೆಡೆ, ಬಿಜೆಪಿ ಶಾಸಕರನ್ನು ಸಂಪರ್ಕಿಸಲು ತಡರಾತ್ರಿವರೆಗೂ ಕಾಂಗ್ರೆಸ್ ನಾಯಕರು ಪ್ರಯತ್ನಿಸಿರುವುದು ತಿಳಿದುಬಂದಿದೆ.

ಪುಟ 2

### 12 ಗಂಟೆಗೂ ಅಧಿಕ ಕಾಲ ಮನೆಯಲ್ಲೇ ವೃದ್ಧೆಯ ಶವ

## ದೇಹ ತುಂಡರಿಸಿದ ಹಂತಕ

**ಬೆಂಗಳೂರು:** ಕೆಲ ದಿನಗಳ ಹಿಂದೆ ಬೆಂಗಳೂರಿನ ಕೆಆರ್ ಪುರಂನಲ್ಲಿ ಪತ್ತೆಯಾದ ವೃದ್ಧೆಯ ಶವ ನಗರವನ್ನೇ ಬೆಚ್ಚಿಬೀಳಿಸಿತ್ತು. ಡ್ರಮ್ ವೊಂದರಲ್ಲಿ ತುಂಡು ತುಂಡಾಗಿದ್ದ ವೃದ್ಧೆಯ ಮೃತದೇಹ ಕಂಡು ಪೊಲೀಸರೇ ದಂಗಾಗಿದ್ದರು. ಪ್ರಕರಣದ ಜಾಡು ಹಿಡಿದು ಹೊರಟ ಪೊಲೀಸರು ಸ್ಥಳೀಯ ಬಿಜೆಪಿ ಕಾರ್ಯಕರ್ತನ ಮನೆ ಬಾಗಿಲು ತಟ್ಟಿದರು. ವಿಚಾರಣೆಯ ಆರಂಭದಲ್ಲಿ ಸಿನಿಮಾ ಕಥೆ ಹೇಳಿದ್ದ ಹಂತಕ ಕೊನೆಗೂ ಚಿನ್ನದ ಸರಕ್ಕಾಗಿ ಕೊಲೆ ಮಾಡಿದ್ದಾಗಿ ಬಾಯಿ ಬಿಟ್ಟಿದ್ದಾನೆ.

ಭಾನುವಾರ (ಫೆ.25)ರ ಸಂಜೆ ಕೆಆರ್ ಪುರಂನ ನಿಸರ್ಗ ಬಡವಾಣೆಯ ಪಾಳು ಮನೆಯ ಸಂದಿಯಲ್ಲಿ ಸಿಕ್ಕ ಡ್ರಮ್ ನಲ್ಲಿ ಪತ್ತೆಯಾದ ತುಂಡು




ತುಂಡಾದ ವೃದ್ಧೆಯ ಮೃತದೇಹ ಆತಂಕ ಸೃಷ್ಟಿಸಿತ್ತು. ಕೊನೆಗೆ ಆ ತುಂಡಾದ ದೇಹ ಅದೆ ಬಡಾವಣೆಯ ನಿವಾಸಿ ವೃದ್ಧೆ ಸುಶೀಲಮ್ಮ ಎಂಬುದು ತಿಳಿಯಿತು. ಬಳಿಕ ಡಾಗ್ ಸ್ಕ್ವಾಡ್ ನೀಡಿದ ಕ್ಲ್ಯೂ ಮೇರೆಗೆ, ದಿನೇಶ್ ಎಂಬಾತನ ವಿಚಾರಣೆ ನಡೆಸಿದ ಕೆಆರ್ ಪುರಂ ಪೊಲೀಸರಿಗೆ ಕೊನೆಗೂ ಹಂತಕ ಈತನೇ ಎಂಬುವು ಗೊತ್ತಾಯಿತು. ವಿಚಾರಣೆ ವೇಳೆ ಮೊದಲಿಗೆ ಆತ ಹೇಳಿದ ಕಥೆ ಒಂದು ಕ್ಷಣ ಪೊಲೀಸರನ್ನೇ ಕನ್ಫ್ಯೂಸ್ ಮಾಡಿತ್ತು.

ಪುಟ 2

### ವ್ಹೀಲಿಂಗ್ ಮಾಡುವರ ಬೆನ್ನಿಗೆ ಬಿದ್ದ ಪೊಲೀಸ್

## ಸ್ಪೆಷಲ್ ಡ್ರೈವ್



**ಬೆಂಗಳೂರು:** ಯುವಕರಲ್ಲಿ ವ್ಹೀಲಿಂಗ್ ಹುಚ್ಚಾಟ ಹೆಚ್ಚಾಗಿದೆ. ಇತ್ತೀಚೆಗಷ್ಟೇ ವ್ಹೀಲಿಂಗ್ ಮಾಡ್ತಿದ್ದ ಯುವಕ ಮತ್ತೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಮೃತಪಟ್ಟ ಘಟನೆ ನಡೆದಿತ್ತು. ಅಲ್ಲದೆ ಅಪಾಯದ ಬಗ್ಗೆ ಅರಿವಿದ್ದರೂ ಯುವಕರು ವ್ಹೀಲಿಂಗ್ ಮಾಡುವುದನ್ನು ಮಾತ್ರ ನಿಲ್ಲಿಸುತ್ತಿಲ್ಲ. ವ್ಹೀಲಿಂಗ್ ಮಾಡುತ್ತ ತಮ್ಮ ಜೀವವನ್ನೂ ಅಪಾಯದಲ್ಲಿಟ್ಟು ಇತರ ಸವಾರರ ಜೀವಕ್ಕೂ ಕುತ್ತಾಗುತ್ತಿದ್ದಾರೆ.

ಪುಟ 2

## ಚರ್ಚ್ ಸ್ಟ್ರೀಟ್‌ನಲ್ಲಿ ಚಲನಚಿತ್ರ ಚಿತ್ರೀಕರಣಕ್ಕೆ ನಿರ್ಬಂಧ

**ಬೆಂಗಳೂರು:** ಸಂಚಾರದಟ್ಟಣೆಕಾರಣನೀಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜನನಿಬಿಡ ಚರ್ಚ್ ಸ್ಟ್ರೀಟ್‌ನಲ್ಲಿ ಚಲನಚಿತ್ರ ಚಿತ್ರೀಕರಣಕ್ಕೆ ನಿರ್ಬಂಧ ಹೇರಿದೆ. ವಿಶೇಷವಾಗಿ ವಾರಾಂತ್ಯದಲ್ಲಿ ಪಾರ್ಟಿಗೆ ಹೋಗುವವರಿಗೆ ಮತ್ತು ಖರೀದಿದಾರರಿಗೆ ಚರ್ಚ್ ಸ್ಟ್ರೀಟ್ ಬೆಂಗಳೂರಿನ ಪ್ರಮುಖ ಆಕರ್ಷಣೆಯಾಗಿದೆ. ಕಳೆದ ಭಾನುವಾರ ಚರ್ಚ ಸ್ಟ್ರೀಟ್ ನಲ್ಲಿ ಸಿನಿಮಾ ಚಿತ್ರೀಕರಣ ನಡೆಯುತ್ತಿದ್ದುದನ್ನು ಗಮನಿಸಿದ ಬಿಬಿಎಂಪಿ ಈ ಆದೇಶ ಹೊರಡಿಸಿದೆ. ಸೂಕ್ತ ಅನುಮತಿ ಪಡೆಯದೆ ಸಿನಿಮಾ ಚಿತ್ರೀಕರಣ ನಡೆಸಲಾಗುತ್ತಿದೆ ಎಂದು ಆರೋಪಿಸಲಾಗಿದೆ.

ಆದರೆ ನಾವು ಪೊಲೀಸರಿಂದ ಅನುಮತಿ ಪಡೆದಿದ್ದೇವೆ ಎಂದು ಮಲಯಾಳಂ ಚಿತ್ರದ ಸಿಬ್ಬಂದಿಯೊಬ್ಬರು ಹೇಳಿದರು. ಈ ಬಗ್ಗೆ ಕೇಂದ್ರೀಯ ಡಿಸಿಪಿ ಶೇಖರ್ ಎಚ್.




ತೆಕ್ಕನವರ್ ಮಾತನಾಡಿ, ನಾವು ಸಿನಿಮಾ ಶೂಟಿಂಗ್‌ಗೆ ಅನುಮತಿ ನೀಡಿಲ್ಲ, ಬಹುತೇಕ ಅವರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ತೆಗೆದುಕೊಂಡಿರಬಹುದು ಎಂದು ಹೇಳಿದ್ದಾರೆ.

ಮತ್ತೊಂದೆಡೆ, ಕೆಎಫ್‌ಸಿಸಿ ಅಧ್ಯಕ್ಷ ಎನ್.ಎಂ.ಸುರೇಶ್ ಮಾತನಾಡಿ ನಾವು ಯಾವುದೇ ಅನುಮತಿ ನೀಡಿಲ್ಲ ಮತ್ತು ಅನುಮತಿ ನೀಡಲು ನಮಗೆ ಯಾವುದೇ ಅಧಿಕಾರವಿಲ್ಲ ಎಂದು ಸ್ಪಷ್ಟಪಡಿಸಿದರು.

ಪುಟ 2

# ಸಂಜೆ ಟಿಪ್ಸ್



## ಭಾರತದ ಫ್ಯಾಷನ್ ರಿಟೇಲ್ ವ್ಯಾಪಾರ ಕ್ಷೇತ್ರದಲ್ಲಿ ಎಐ-ಚಾಲಿತ ನಾವೀನ್ಯತೆ

ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಫ್ಯಾಷನ್ ಉದ್ಯಮದಲ್ಲಿ, ಪರಿವರ್ತಕ ತಂತ್ರಜ್ಞಾನವು ಗ್ರಾಹಕರನ್ನು ಸೆಳೆಯಲು ಮತ್ತು ಹೆಚ್ಚು ಖರೀದಿಗಳನ್ನು ಸಾಧ್ಯವಾಗಿಸಲು ಪ್ರಮುಖವಾಗಿ ಕೆಲಸ ಮಾಡುತ್ತದೆ. ಎಐ ಚಾಲಿತ ಡೇಟಾದ ಸಹಾಯದಿಂದ, ಉದ್ದಿಮೆಗಳು ಈಗ ಭಾರತದ ಟೈರ್ 2 ಮತ್ತು ಟೈರ್ 3 ನಗರಗಳಲ್ಲಿನ ಗ್ರಾಹಕರನ್ನು ನಿಖರವಾಗಿ ಗುರಿಯಾಗಿಸಬಹುದಾಗಿದೆ ಮತ್ತು ಹೀಗಾಗಿ ಮಾರುಕಟ್ಟೆ ವ್ಯಾಪ್ತಿ ಮತ್ತು ಪರಿಣಾಮವನ್ನು ಹೆಚ್ಚಿಸಬಹುದಾಗಿದೆ'' ಎಂದು ಬೆಂಗಳೂರಿನಲ್ಲಿ ನಡೆದ ಇಂಡಿಯಾ ಫ್ಯಾಶನ್ ಫೋರಮ್ 2024ರಲ್ಲಿ ಮೆಟಾ ಇಂಡಿಯಾದ ನಿರ್ದೇಶಕಿ ಮೇಘನಾ ಅಪ್ಪಾರಾವ್ ಹೇಳಿದ್ದಾರೆ.

ಗ್ರಾಹಕರೊಂದಿಗೆ ಸಂಪರ್ಕ ಸಾಧಿಸುವ ಮೂಲಕ ಮತ್ತು ಖರೀದಿಗಳನ್ನು ಹೆಚ್ಚುಗೊಳಿಸುವ ಮೂಲಕ ಫ್ಯಾಶನ್ ವ್ಯವಹಾರಗಳ ಬಲವರ್ಧನೆಯಲ್ಲಿ ಮೆಟಾ ಪ್ಲಾಟ್ಫಾರ್ಮ್ಗಳ ಪಾತ್ರವನ್ನು ಒತ್ತಿ ಹೇಳಿದ ಮಾಡಿದ ಅವರು, ''ಜಗತ್ತಿನಾದ್ಯಂತ 3.8 ಶತಕೋಟಿ ಮಾಸಿಕ ಸಕ್ರಿಯ ಬಳಕೆದಾರರನ್ನು ಮೆಟಾ ಹೊಂದಿದೆ. ಭಾರತ ಒಂದು ಸರ್ವೋತ್ಕೃಷ್ಟ ಫ್ಯಾಷನ್ ತಾಣವಾಗಿ ಬೆಳೆದಿದೆ ಎಂದು ಹೇಳಿದ್ದಾರೆ. ಫ್ಯಾಷನ್ ವ್ಯವಹಾರದಲ್ಲಿನ ಅಡೆತಡೆಗಳ ಕುರಿತು ಮಾತನಾಡಿದ ಅರವಿಂದ್ ಫ್ಯಾಶನ್ಸ್ನ ಎಂಡಿ ಮತ್ತು ಸಿಇಒ ಶೈಲೇಶ್ ಚತುರ್ವೇದಿ, ನಾವು ನಮ್ಮ ವ್ಯವಹಾರಗಳನ್ನು ಹೇಗೆ ನಡೆಸುತ್ತೇವೆ ಮತ್ತು ನಮ್ಮ ಬಂಡವಾಳವನ್ನು ಪರಿಣಾಮಕಾರಿಯಾಗಿ ಹೇಗೆ ಬಳಸಿಕೊಳ್ಳುತ್ತೇವೆ ಎಂಬುದರ ಮೂಲಭೂತ ಅಂಶಗಳನ್ನು ನಾವು ಮರುಪರಿಶೀಲಿಸಬೇಕಾಗಿದೆ ಎಂದರು. ಮೆಟಾದ ಗಮನಾರ್ಹ ಮಾರುಕಟ್ಟೆಯಾಗಿದೆ'' ಎಂದು ಅವರು ತಿಳಿಸಿದರು.

ಕೃತಕ ಬುದ್ಧಿಮತ್ತೆ(ಎಐ) ಮತ್ತು ಫ್ಯಾಷನ್ ಸಂಯೋಜನೆಯಿಂದ ಮಹತ್ತರ ಬದಲಾವಣೆ ಸಾಧ್ಯವಾಗಿದೆ. ಯೂಟ್ಯೂಬ್ ಇಂಡಿಯಾದ ಸೇಲ್ಸ್ ಆಂಡ್ ಸೊಲ್ಯೂಷನ್ಸ್ ವಿಭಾಗ ಮುಖ್ಯಸ್ಥರಾದ ಶುಭಾ ಪೈ ಅವರು, ಡಿಸೆಂಬರ್ 2023ರಲ್ಲಿ ಫ್ಯಾಶನ್ ಮತ್ತು ದಿರಿಸುಗಳ ಕಂಟೆಂಟ್ 5 ಬಿಲಿಯನ್ ವೀಕ್ಷಣೆಗಳನ್ನು ಪಡೆದು ಸಾಧನೆ ಮಾಡಿತ್ತು. ಈ ಮೂಲಕ ಯುಟ್ಯೂಬ್

## ಹೆಸರುಬೇಳೆ ಹಲ್ವಾ

### ಪಾಕ ಶಾಲೆ



### ಬೇಕಾಗಿರುವ ಪದಾರ್ಥ

ಹೆಸರು ಬೇಳೆ - 1/2 ಕಪ್, ಬೆಲ್ಲ - 1/2 ಕಪ್, ಹಾಲು - 2 ಕಪ್, ತುಪ್ಪ 1/2 ಕಪ್, ಗೋಡಂಬಿ, ಬದಾಮ್ - 1/2 ಟೇಬಲ್ ಸ್ಪೂನ್, ಏಲಕ್ಕಿ ಪುಡಿ - 1/2 ಟೀ ಸ್ಪೂನ್

### ಮಾಡುವ ವಿಧಾನ

ಮೊದಲು ಹೆಸರು ಬೇಳೆಯನ್ನ ತೆಗೆದುಕೊಂಡು ಎರಡು ಬಾರಿ ಚೆನ್ನಾಗಿ ತೊಳೆದು ಅದನ್ನ ಬಾಣಲೆಗೆ ಹಾಕಿ ಸಣ್ಣ ಉರಿಯಲ್ಲಿ ಹುರಿದುಕೊಳ್ಳಿ. ಅದರ ಹಸಿ ವಾಸನೆ ಹೋಗಿ ಕಂದು ಬಣ್ಣಕ್ಕೆ ತಿರುಗುತ್ತಿದ್ದಂತೆ ಉರಿಯನ್ನ ಆರಿಸಿ. ಹುರಿದ ಹೆಸರುಕಾಳನ್ನು ಮಿಕ್ಸರ್ ಜಾರ್ಗೆ ಹಾಕಿ ಪುಡಿ ಮಾಡಿಕೊಳ್ಳಿ. ಇದರ ಜೊತೆಜೊತೆಗೇ ಮತ್ತೊಂದು ಪಾತ್ರೆಯಲ್ಲಿ ಅರ್ಧ ಕಪ್ ಬೆಲ್ಲವನ್ನ ತೆಗೆದುಕೊಂಡು ಅದಕ್ಕೆ ಸ್ವಲ್ಪ ನೀರು ಸಿಂಪಡಿಸಿ ಸಣ್ಣ ಉರಿಯ ಮೇಲಿಟ್ಟು ಬೆಲ್ಲದ ಸಿರಪ್ ತಯಾರಿಸಿಟ್ಟುಕೊಳ್ಳಿ. ಈಗ ಸ್ವಲ್ಪ ದಪ್ಪ ತಳದ ಬಾಣಲೆಯನ್ನ ತೆಗೆದುಕೊಂಡು ಅದಕ್ಕೆ ಒಂದು ಟೇಬಲ್ ಸ್ಪೂನ್ ತುಪ್ಪ ಹಾಕಿ ಗೋಡಂಬಿ ಮತ್ತು ಬದಾಮ್ ತುಣುಕುಗಳನ್ನ ಹುರಿದು ತೆಗೆದಿಟ್ಟುಕೊಳ್ಳಿ. ನಂತರ ಬಾಣಲೆಯಲ್ಲಿ ಉಳಿದಿದ್ದ ತುಪ್ಪಕ್ಕೆ ಇನ್ನೊಂದು ಟೇಬಲ್ ಸ್ಪೂನ್ ತುಪ್ಪ ಸೇರಿಸಿ ಅದಕ್ಕೆ ಹೆಸರು ಬೇಳೆಯ ಹಿಟ್ಟನ್ನು ಹಾಕಿ ಹುರಿಯಿರಿ ತುಪ್ಪದೊಂದಿಗೆ ಸೇರಿ ಹೆಸರು ಬೇಳೆಯ ಪುಡಿ ಮುದ್ದೆಯಾಗುತ್ತಿದ್ದಂತೆ ಅದಕ್ಕೆ ಬಿಸಿ ಹಾಲನ್ನು ಹಾಕಿ ಚನ್ನಾಗಿ ಕಲಕಿ. ಹಾಲಿನಲ್ಲಿ ಹೆಸರು ಬೇಳೆಯ ಹಿಟ್ಟು ಬೇಯುತ್ತಿದ್ದಂತೆ ಉಳಿದ ತುಪ್ಪ ಮತ್ತು ಬೆಲ್ಲದ ಸಿರಪ್ನ್ನ ಸೇರಿಸಿ ಸಣ್ಣ ಉರಿಯಲ್ಲಿ ಸರಿಯಾಗಿ ತಿರುವಿ. ಮಿಶ್ರಣ ಸರಿಯಾಗಿ ಬೆಂದಾಗ ಅದು ತುಪ್ಪ ಬಿಡುತ್ತದೆ. ಆಗ ಹಲ್ವಾ ಸಿದ್ಧಗೊಂಡಿದೆ ಎಂದು ಅರ್ಥ. ಸಿದ್ಧಗೊಂಡ ಹಲ್ವಾಕ್ಕೆ ಏಲಕ್ಕಿ ಪುಡಿ ಮತ್ತು ಮೊದಲೇ ಹುರಿದು ಇಟ್ಟುಕೊಂಡಿದ್ದ ಗೋಡಂಬಿ, ಬದಾಮ್ ತುಣುಕುಗಳನ್ನ ಸೇರಿಸಿ.

## ನಮಸ್ಕಾರ, ಇದು ನಿಮ್ಮ ಪ್ರೀತಿಯ ಕಿಚ್ಚ ಸುದೀಪ್: PhonePe ವಾಯ್ಸ್ ಫೀಚರ್ ಬಿಡುಗಡೆ



ಪ್ರಖ್ಯಾತ ಭಾರತೀಯ ನಟ, ಕಿಚ್ಚ ಸುದೀಪ್ ಅವರ ಸಹಯೋಗದೊಂದಿಗೆ ತನ್ನ ಸ್ಮಾರ್ಟ್ಸ್ಪೀಕರ್ಗಳಲ್ಲಿ ಮೊದಲ ಬಾರಿಗೆ ಸೆಲೆಬ್ರಿಟಿ ವಾಯ್ಸ್ ಫೀಚರ್ ಅನ್ನು ಬಿಡುಗಡೆ ಮಾಡುವುದಾಗಿ PhonePe ಇಂದು ಘೋಷಿಸಿತು. ಈ ಹೊಸ ಫೀಚರ್ನಿಂದ ಕರ್ನಾಟಕ ಚಲನಚಿತ್ರೋದ್ಯಮದ ಅಪ್ರತಿಮ ನಟ ಕಿಚ್ಚ ಸುದೀಪ್ ಅವರ ವಿಶಿಷ್ಟ ವಾಯ್ಸ್ನಲ್ಲಿ ಭಾರತದಾದ್ಯಂತ ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಗ್ರಾಹಕರ ಪಾವತಿಗಳನ್ನು ಮೌಲ್ಯೀಕರಿಸಲು PhonePe ಸ್ಮಾರ್ಟ್ಸ್ಪೀಕರ್ಗಳಿಗೆ ಸಾಧ್ಯವಾಗಿಸುತ್ತದೆ. PhonePe ಸ್ಮಾರ್ಟ್ಸ್ಪೀಕರ್ ಅನ್ನು ಒಂದು ವರ್ಷದ ಹಿಂದೆ ಪ್ರಾರಂಭಿಸಲಾಯಿತು. ಅಂದಿನಿಂದ, ದೇಶದ 90% ಪೋಸ್ಟಲ್ ಕೋಡ್ಗಳಲ್ಲಿ ವ್ಯಾಪಾರಿ ಪಾಲುದಾರರು 4 ಮಿಲಿಯನ್ಗಿಂತಲೂ ಹೆಚ್ಚು ಸಾಧನಗಳನ್ನು ಬಳಸಿದ್ದಾರೆ. ಸರಾಸರಿ, ಕ್ಯುಆಟಿಜಕಜ ಸ್ಮಾರ್ಟ್ಸ್ಪೀಕರ್ಗಳು ಕರ್ನಾಟಕದಲ್ಲಿ ತಿಂಗಳಿಗೆ 13.5 ಕೋಟಿ ವಹಿವಾಟುಗಳನ್ನು ಮೌಲ್ಯೀಕರಿಸುತ್ತವೆ. ಇದು ರಾಜ್ಯದಲ್ಲಿ ಅದರ ವ್ಯಾಪಕ ಅಳವಡಿಕೆಯನ್ನು ತೋರಿಸುತ್ತದೆ. ವಿವಿಧ ಪ್ರದೇಶಗಳ ಪ್ರಸಿದ್ಧ ಸೆಲೆಬ್ರಿಟಿ ವಾಯ್ಸ್ಗಳನ್ನು ಬಳಸುವುದರಿಂದ ಗ್ರಾಹಕರು ಮತ್ತು ವ್ಯಾಪಾರಿಗಳಿಗೆ ಪಾವತಿ ಅನುಭವವನ್ನು ಇನ್ನಷ್ಟು ಉತ್ತಮವಾಗಿಸಲು ಸಾಧ್ಯವಾಗುತ್ತದೆ. ಈ ಹೊಸ ಮತ್ತು ವಿಶಿಷ್ಟ ಕೊಡುಗೆಯ ಕುರಿತು ಮಾತನಾಡಿದ, PhonePe ನ ಮರ್ಚೆಂಟ್ ಬ್ಯುಸಿನೆಸ್ನ ಮುಖ್ಯ ವ್ಯಾಪಾರ ಅಧಿಕಾರಿ ಯುವರಾಜ್ ಸಿಂಗ್ ಶೆಖಾವತ್, ''ನಮ್ಮ ವ್ಯಾಪಕವಾದ 3.7 ಕೋಟಿ ವ್ಯಾಪಾರಿಗಳ ನೆಟ್ವರ್ಕ್ ಭಾರತದ ವಿವಿಧ ಪ್ರದೇಶಗಳಲ್ಲಿ ಹರಡಿಕೊಂಡಿದೆ. ಪ್ರತಿಯೊಂದೂ ಪಾವತಿ ಮೌಲ್ಯೀಕರಣಕ್ಕಾಗಿ ಅದರ ವಿಶಿಷ್ಟ ಭಾಷಾ ಅಗತ್ಯಗಳನ್ನು ಹೊಂದಿದೆ. ವಿವಿಧ ಹೆಸರಾಂತ ಸೆಲೆಬ್ರಿಟಿಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳುವ ಮೂಲಕ, ನಮ್ಮ ವ್ಯಾಪಾರಿಗಳ ವಿಭಿನ್ನ ಅಗತ್ಯಗಳನ್ನು ಸೃಜನಾತ್ಮಕ ರೀತಿಯಲ್ಲಿ ಪೂರೈಸಲು ನಾವು ನಮ್ಮ ಸೇವೆಗಳನ್ನು ಅಳವಡಿಸಿಕೊಳ್ಳುತ್ತಿದ್ದೇವೆ ಮತ್ತು ಸರಿಹೊಂದಿಸುತ್ತಿದ್ದೇವೆ. ಇದು ನಮ್ಮ ಸಾಧನಗಳ ಸಮರ್ಥ ಬಳಕೆಯನ್ನು ಖಚಿತಪಡಿಸುತ್ತದೆ ಮತ್ತು ವ್ಯಾಪಾರಿಗಳು ಮತ್ತು ಗ್ರಾಹಕರು ಕ್ಯುಆಟಿಜಕಜ ಸ್ಮಾರ್ಟ್ಸ್ಪೀಕರ್ಗೆ ಆಕರ್ಷಿತರಾಗುವಂತೆ ಮಾಡುತ್ತದೆ'' ಎಂದು ಹೇಳಿದರು.

ವ್ಯಾಪಾರಿಗಳು ತಮ್ಮ PhonePe for Business ಆ್ಯಪ್‌ನಿಂದ ಈ ಹೊಸ ಫೀಚರ್ ಅನ್ನು ಹೇಗೆ ಸಕ್ರಿಯಗೊಳಿಸಬಹುದು ಎಂಬುದರ ಕುರಿತ ಹಂತ-ಹಂತದ ಮಾರ್ಗದರ್ಶಿ ಇಲ್ಲಿದೆ. PhonePe for Business ಆ್ಯಪ್ ಅನ್ನು ತೆರೆಯಿರಿ, ಮುಖಪುಟದಲ್ಲಿ ಸ್ಮಾರ್ಟ್ಸ್ಪೀಕರ್ ವಿಭಾಗಕ್ಕೆ ಹೋಗಿ ನನ್ನ ಸ್ಮಾರ್ಟ್ಸ್ಪೀಕರ್ ಅಡಿಯಲ್ಲಿ, ಸ್ಮಾರ್ಟ್ಸ್ಪೀಕರ್ ವಾಯ್ಸ್ ಮೇಲೆ ಕ್ಲಿಕ್ ಮಾಡಿ, ಬಯಸಿದ ಸೆಲೆಬ್ರಿಟಿಗಳ ವಾಯ್ಸ್ ಅನ್ನು ಆದ್ಯತೆಯ ಭಾಷೆಯಲ್ಲಿ ಆಯ್ಕೆಮಾಡಿ, ವಾಯ್ಸ್ ಅನ್ನು ಸಕ್ರಿಯಗೊಳಿಸಲು ದೃಢೀಕರಿಸಿಮೇಲೆ ಕ್ಲಿಕ್ ಮಾಡಿ, ಆಯ್ದ ಸೆಲೆಬ್ರಿಟಿಗಳ ವಾಯ್ಸ್ನಲ್ಲಿ ಅಪ್ಡೇಟ್ ಮಾಡಿದ ಭಾಷೆಯೊಂದಿಗೆ ಸಾಧನವು ಕೆಲವೇ ಗಂಟೆಗಳಲ್ಲಿ ರೀಬೂಟ್ ಆಗುತ್ತದೆ PhonePe ಇತ್ತೀಚೆಗೆ ತನ್ನ ಸ್ಮಾರ್ಟ್ಸ್ಪೀಕರ್ಗಳಲ್ಲಿ ಪ್ರಸಿದ್ಧ ಭಾರತೀಯ ನಟ, ಅಮಿತಾಭ್ ಬಚ್ಚನ್ ಅವರ ಸಹಯೋಗದೊಂದಿಗೆ ಹಿಂದಿ ಮತ್ತು ಇಂಗ್ಲಿಷ್ನಲ್ಲಿ ಸೆಲೆಬ್ರಿಟಿ ವಾಯ್ಸ್ ಫೀಚರ್ ಅನ್ನು ಬಿಡುಗಡೆ ಮಾಡಿತ್ತು. ಇದರೊಂದಿಗೆ ಇನ್ನಷ್ಟು ಭಾಷೆಗಳಲ್ಲಿ ಹೊರತರುವ ಯೋಜನೆಯನ್ನೂ ಹಮ್ಮಿಕೊಂಡಿತ್ತು.

## ಕಿಡ್ನಿಸ್ಟೋನ್‌ಗೆ ಮನೆಮದ್ದು



ಕಿಡ್ನಿಸ್ಟೋನ್ ಎಂದ ಕೂಡಲೇ ಭಯ ಬೇಡ. ಹಾಗೆಂದು ನಿರ್ಲಕ್ಷ್ಯವೂ ಸಲ್ಲದು. ಸಣ್ಣ ಪ್ರಮಾಣದ ಕಿಡ್ನಿಸ್ಟೋನ್ ಇದ್ದರೆ ಮನೆಮದ್ದಿನಿಂದಲೇ ಅದನ್ನು ಪರಿಹಾರ ಮಾಡಿಕೊಳ್ಳಬಹುದು. ಸರಿಯಾದ ಆಹಾರ ಕ್ರಮ ಅನುಸರಿಸಿದ್ರೆ ಕಿಡ್ನಿ ಸ್ಟೋನ್ ಮನೆಯಲ್ಲೇ ಕರಗುವ ಸಾಧ್ಯತೆ ಇರುತ್ತದೆ.

ಹಾಗಾದರೇ ಯಾವೆಲ್ಲಾ ಮನೆಮದ್ದುಗಳು ಕಿಡ್ನಿಸ್ಟೋನ್ ನಿವಾರಿಸಲು ನೆರವಾಗುತ್ತದೆ ಬನ್ನಿ ನೋಡೋಣ.

**ಬಾಳೆದಿಂಡಿನ ಜ್ಯೂಸ್:** ಕಿಡ್ನಿ ಸ್ಟೋನ್ ಇರುವವರು ಬೆಳಿಗ್ಗೆ ಮತ್ತು ಸಂಜೆ ಬಾಳೆ ದಿಂಡಿನ ರಸ ಸೇವಿಸುವುದರಿಂದ ಕಿಡ್ನಿಯಲ್ಲಿರುವ ಕಲ್ಲು ಕರಗುತ್ತದೆ. ಕಿಡ್ನಿ ಸ್ಟೋನ್ ಬಾರದಂತೆ ನಿಯಂತ್ರಿಸಲು ವಾರದಲ್ಲಿ ಒಮ್ಮೆಯಾದರೂ ಬಾಳೆ ದಿಂಡಿನ ಪಲ್ಯ ಸೇವಿಸಿ.

**ನಿಂಬೆ ಹಣ್ಣಿನ ಜ್ಯೂಸ್:** ಜೇನುತುಪ್ಪದೊಂದಿಗೆ ನಿಂಬೆ ಹಣ್ಣಿನ ಜ್ಯೂಸ್ ಸೇವನೆ ಮಾಡುವುದರಿಂದ ಕಿಡ್ನಿ ಸ್ಟೋನ್ ಕರಗುವ ಸಾಧ್ಯತೆ ಇರುತ್ತದೆ.

**ಬಾರ್ಲಿ ನೀರು:** 3 ಲೀಟರ್ ನೀರಿಗೆ ಒಂದು ಹಿಡಿ ಬಾರ್ಲಿ ಹಾಕಿ ಕುದಿಸಿ, ಬೆಳಗ್ಗಿನಿಂದ ರಾತ್ರಿಯವರೆಗೆ ಆ ನೀರನ್ನು ಕುಡಿಯುತ್ತಾ ಬಂದಲ್ಲಿ ಕಿಡ್ನಿ ಸ್ಟೋನ್ ಕರಗಿ ಹೋಗುವ ಸಾಧ್ಯತೆ ಇರುತ್ತದೆ.

ಹೆಲ್ತ್ ಟಿಪ್ಸ್

**ಎಳನೀರು:** ಪ್ರತಿ ನಿತ್ಯ 6 - 7 ಎಳನೀರು ಕುಡಿಯುವುದರಿಂದ ಕಿಡ್ನಿಸ್ಟೋನ್ ಸಮಸ್ಯೆಯಿಂದ ಮುಕ್ತಿ ಹೊಂದಬಹುದು. ಈ ಸಮಯದಲ್ಲಿ ಯಾವುದೇ ಆಹಾರ ಸೇವನೆ ಬೇಡ.

**3 ಲೀಟರ್ ನೀರು ಕುಡಿಯಿರಿ:** ಪ್ರತಿದಿನ 3-4 ಲೀಟರ್ ನೀರು ಕುಡಿಯುವುದರಿಂದ ಕಿಡ್ನಿ ಸ್ಟೋನ್ ಹತ್ತಿರವೂ ಸುಳಿಯುವುದಿಲ್ಲ. ಇನ್ನೂ ಈಗ ಬೇಸಿಗೆಯಾಗಿರುವುದರಿಂದ ದೇಹ ಡೀ ಹೈಡ್ರೇಟ್ ಆಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ತಪ್ಪದೇ ನೀರು ಕುಡಿಯಿರಿ.

## ಹೇರ್ ಸ್ಪ್ರೇ ಬಳಸುವ ಮುನ್ನ ಎಚ್ಚರ

### ಬ್ಯೂಟಿ ಟಿಪ್ಸ್



ಹೇರ್ ಸ್ಟೈಲ್ ಮಾಡಿಕೊಳ್ಳೋಕೆ ಯಾವ ಹೆಣ್ಣುಮಕ್ಕಳಿಗೆ ಇಷ್ಟವಿಲ್ಲ ಹೇಳಿ. ಮೇಕಪ್ ಮಾಡಿಕೊಂಡಾಗ ಹೇರ್ ಸ್ಟೈಲ್ ಮಾಡಿಕೊಂಡಾಗಲೇ ಅದು ಪರಿಪೂರ್ಣವಾಗೋದು. ಹೇರ್ ಸ್ಟೈಲ್ನಲ್ಲಿ ಅನೇಕ ಬಗೆಗಳಿವೆ. ದಿನ ದಿನಕ್ಕೂ ಒಂದೊಂದು ಹೇರ್ ಸ್ಟೈಲ್ ಹುಟ್ಟಿಕೊಳ್ಳುತ್ತಿವೆ. ಸ್ಟೈಲಿಶ್ ಹೇರ್ ಸ್ಟೈಲ್ ಬೇಕೆಂದರೆ ಹೇರ್ ಸ್ಪ್ರೇ ಮಾಡಲೇಬೆಂಕೆಂದು ಹೇರ್ ಡಿಸೈನರ್ಗಳು ಸಲಹೆ ನೀಡುತ್ತಾರೆ. ಆದರೆ ಈ ಹೇರ್ ಸ್ಪ್ರೇ ಬಳಸುವುದರಿಂದ ಕೂದಲಿಗೆ ತುಂಬಾ ಹಾನಿಕಾರಕ ಎಂದು ಮೊದಲು ತಿಳಿದುಕೊಳ್ಳಿ. ವಿವಿಧ ಬಗೆಯ ಅನೇಕ ರಾಸಾಯನಿಕಗಳನ್ನು ಬಳಸಿ ಈ ಹೇರ್ ಸ್ಪ್ರೇಗಳನ್ನು ತಯಾರಿಸಿರುತ್ತಾರೆ. ಈ ರಾಸಾಯನಿಕರಗಳು ಕೂದಲಿಗೆ ಹಾಗು ಚರ್ಮಕ್ಕೂ ತುಂಬಾ ಅಪಾಯಕಾರಿ. ಅಪರೂಪಕ್ಕೆಂದು ಹೇರ್ ಸ್ಪ್ರೇ ಬಳಸಲು ಅಡ್ಡಿಯಿಲ್ಲ. ಆದರೆ ನಿರಂತರವಾಗಿ ಹೇರ್ ಸ್ಪ್ರೇ ಬಳಸಿದರೆ ಕೂದಲು ಬೇಗನೇ ಡ್ಯಾಮೇಜ್ ಆಗುತ್ತವೆ. ಕೂದಲಿಗೆ ಸಂಬಧಿಸಿದ ಅನೇಕ ಸಮಸ್ಯೆಗಳು ಕಾಣಿಸಲು ಶುರುವಾಗುತ್ತವೆ. ಇದರಲ್ಲಿರುವ ರಾಸಾಯನಿಕಗಳು ಚರ್ಮಕ್ಕೆ ಒಳ್ಳೆಯದಲ್ಲ ಎಂದು ವೈದ್ಯರು ಹೇಳುತ್ತಾರೆ. ನಿರಂತವಾಗಿ ಹೇರ್ ಸ್ಪ್ರೇ ಬಳಸುವುದರಿಂದ ಆಗುವ ಅಪಾಯಗಳೇನೆಂದರೆ ಕೂದಲಿನ ಆರೋಗ್ಯ ಹದಗೆಡುತ್ತದೆ. ಹೇರ್ ಸ್ಪ್ರೇ ಬಳಸಿದರೆ ಕೂದಲಿಗೆ ಹಚ್ಚುವ ನೈಸರ್ಗಿಕ ಕೊಬ್ಬರಿ ಎಣ್ಣೆ ಅಥವಾ ನೈಸರ್ಗಿಕವಾಗಿ ಮಾಡಿದ ಹೇರ್ ಪ್ಯಾಕ್ಗಳು ಅಷ್ಟೊಂದು ಪರಿಣಾಮ ಬೀರುವುದಿಲ್ಲ. ಕಾರಣ ಹೇರ್ ಸ್ಪ್ರೇನಲ್ಲಿರುವ ರಾಸಾಯನಿಕಗಳು ಹೆಚ್ಚು ಶಕ್ತಿಯುತವಾಗಿರುತ್ತವೆ. ಕೂದಲು ಉದುರುವುದು ಹೆಚ್ಚಾಗಿ ದಟ್ಟವಾಗಿ ಕೂದಲು ಬೆಳೆಯುವುದು ಕ್ರಮೇಣ ಕಡಿಮೆಯಾಗುತ್ತದೆ. ಕೂದಲಿನ ಒರಟುತನ ಹೆಚ್ಚಾಗುತ್ತದೆ. ಕೂದಲು ತುಂಡಾಗುವದು. ಹಾಗು ನೆತ್ತಿಯ ಚರ್ಮ ತುರಿಗೆಯಾಗುವುದು. ಹೀಗೆ ಅನೇಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಹಾಗಾಗಿ ನಿರಂತರವಾಗಿ ಹೇರ್ ಸ್ಪ್ರೇಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡಿ.

## ಭಾರತದಲ್ಲೇ ಮೊದಲ ಬಾರಿಗೆ ಪ್ರಾಣಿಗಳ ರಕ್ಷಣೆಗಾಗಿ ವಂತಾರದಿಂದ ವಿಶಿಷ್ಟ ಕಾರ್ಯಕ್ರಮ ಘೋಷಣೆ



ರಿಲಯನ್ಸ್ ಇಂಡಸ್ಟ್ರೀಸ್ ಹಾಗೂ ರಿಲಯನ್ಸ್ ಫೌಂಡೇಷನ್ ನಿಂದ ಸೋಮವಾರ (ಫೆಬ್ರವರಿ 26) ಮಹತ್ತರವಾದ ಕಾರ್ಯಕ್ರಮವೊಂದನ್ನು ಘೋಷಣೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ವಂತಾರ (ಸ್ಟಾರ್ ಆಫ್ ದ ಫಾರೆಸ್ಟ್) ಎಂದು ಹೆಸರಿಡಲಾಗಿದೆ. ಈ ಉಪಕ್ರಮದ ಅಡಿಯಲ್ಲಿ ಮಾಡುವ ಕೆಲಸ ಏನೆಂದರೆ, ಭಾರತ ಹಾಗೂ ವಿದೇಶಗಳಲ್ಲಿ ಗಾಯಗೊಂಡ, ಆತಂಕಕ್ಕೆ ಗುರಿಯಾದ, ಸಮಸ್ಯೆಗೆ ಈಡಾದ ಪ್ರಾಣಿಗಳ ರಕ್ಷಣೆ, ಆರೈಕೆ, ಚಿಕಿತ್ಸೆ ಹಾಗೂ ಪುನರ್ವಸತಿಯನ್ನು ಕಲ್ಪಿಸಲಾಗುತ್ತದೆ. ಗುಜರಾತ್ ನ ಜಾಮ್ ನಗರದಲ್ಲಿನ ರಿಲಯನ್ಸ್ ರಿಫೈನರಿ ಸಮುಚ್ಚಯದ ಹಸಿರು ವಲಯ 3000 ಎಕರೆ ವ್ಯಾಪಿಸಿದೆ.

ಜಾಗತಿಕ ಮಟ್ಟದಲ್ಲಿಯೇ ಈ ರೀತಿ ಸಂರಕ್ಷಣೆಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಕೊಡುಗೆ ನೀಡುತ್ತಿರುವ ಪ್ರಮುಖ ಉಪಕ್ರಮ ''ವಂತಾರ''ದಿಂದ ಆಗುತ್ತಿದೆ. ಪ್ರಾಣಿಗಳ ರಕ್ಷಣೆ ಹಾಗೂ ಸುರಕ್ಷತೆಯನ್ನು ದೃಷ್ಟಿಯಲ್ಲಿ ಇರಿಸಿಕೊಂಡು, ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಮುಖ ಪರಿಣತರ ಜತೆಗೂಡಿ 3000 ಎಕರೆ ಪ್ರದೇಶವನ್ನು ಅರಣ್ಯದ ರೀತಿಯ ವಾತಾವರಣವಾಗಿ ವಂತಾರ ಪರಿವರ್ತನೆ ಮಾಡಿದೆ. ಇದು ಸಹಜವಾಗಿ, ಶ್ರೀಮಂತ ಪರಿಸರದಲ್ಲಿ, ದಟ್ಟಾರಣ್ಯದಿಂದ ರಕ್ಷಣೆ ಮಾಡುವ ಪ್ರಾಣಿಗಳಿಗೆ ಆವಾಸ ಸ್ಥಾನವಾಗಿದೆ.

ಈ ವಂತಾರ ಉಪಕ್ರಮವು ಈ ರೀತಿಯಾಗಿ ಮಾಡುತ್ತಿರುವುದು ಭಾರತದಲ್ಲಿಯೇ ಮೊದಲನೆಯದು. ವಂತಾರ ಹುಟ್ಟಿನ ಪರಿಕಲ್ಪನೆ ಹಾಗೂ ಅನುಷ್ಠಾನ ಆಗುತ್ತಿರುವುದು ರಿಲಯನ್ಸ್ ಮಂಡಳಿ ಹಾಗೂ ರಿಲಯನ್ಸ್ ಫೌಂಡೇಷನ್ ನಿರ್ದೇಶಕರಾದ ಅನಂತ್ ಅಂಬಾನಿ ಅವರ ನಾಯಕತ್ವದಲ್ಲಿ. ಅಷ್ಟೇ ಅಲ್ಲ, ಜಾಮ್ ನಗರದಲ್ಲಿ ರಿಲಯನ್ಸ್ ನ ನವೀಕರಿಸುವ ಇಂಧನ ವ್ಯವಹಾರವನ್ನು ಮುನ್ನಡೆಸುತ್ತಿರುವವರು ಸಹ ಅನಂತ್ ಅಂಬಾನಿಯವರೇ. ಈ ಮೂಲಕ 2035ರ ವೇಳೆಗೆ ನೆಟ್ ಕಾರ್ಬನ್ ಝೀರೋ ಕಂಪನಿಯಾಗಲು ರಿಲಯನ್ಸ್‌ನ ಮುನ್ನಡೆಸುವ ಜವಾಬ್ದಾರಿಯನ್ನು ಹೊತ್ತಿದ್ದಾರೆ.

ಈ ಬಗ್ಗೆ ಮಾತನಾಡಿದ ಅನಂತ್ ಅಂಬಾನಿ ಅವರು, ''ನನಗೆ ಚಿಕ್ಕ ವಯಸ್ಸಿನಲ್ಲೇ ಶುರುವಾದ ಈ ಪ್ರೀತಿಯು ಈಗ ನಮ್ಮ ಅದ್ಭುತ ತಂಡ ಮತ್ತು ಬದ್ಧತೆಯೊಂದಿಗೆ ವಂತರಾ ರೂಪದಲ್ಲಿ ಸಾಕಾರ ಆಗಿದೆ. ಭಾರತದಲ್ಲಿ ಸ್ಥಳೀಯವಾಗಿ ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು ರಕ್ಷಿಸುವಲ್ಲಿ ನಾವು ಗಮನಹರಿಸಿದ್ದೇವೆ. ನಾವು ಪ್ರಮುಖ ಆವಾಸಸ್ಥಾನಗಳನ್ನು ಪುನಃಸ್ಥಾಪಿಸಲು ಮತ್ತು ಆ ಜೀವ ಪ್ರಭೇದಗಳಿಗೆ ಇರುವ ಆತಂಕವನ್ನು ನಿವಾರಿಸುವುದಕ್ಕೆ ಬಯಸುತ್ತೇವೆ. ನಮ್ಮ ಪ್ರಯತ್ನಗಳು ಭಾರತದಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವುದಕ್ಕೆ ನಾವು ಸಂತೋಷಪಡುತ್ತೇವೆ. ಭಾರತದ ಮತ್ತು ವಿಶ್ವದ ಕೆಲವು ಉನ್ನತ ಪ್ರಾಣಿಶಾಸ್ತ್ರ ಮತ್ತು ವೈದ್ಯಕೀಯ ತಜ್ಞರು ನಮ್ಮ ಮಿಷನ್‌ಗೆ ಸೇರಿಕೊಂಡಿದ್ದಾರೆ ಮತ್ತು ಸರ್ಕಾರಿ ಸಂಸ್ಥೆಗಳು, ಸಂಶೋಧನೆ ಮತ್ತು ಶಿಕ್ಷಣ ಸಂಸ್ಥೆಗಳ ಸಕ್ರಿಯ ಸಹಯೋಗ ಮತ್ತು ಮಾರ್ಗದರ್ಶನವನ್ನು ಪಡೆಯುತ್ತಿರುವುದಕ್ಕೆ ನಮಗೆ ಸಂತೋಷವಾಗಿದೆ. ತರಬೇತಿ, ಸಾಮರ್ಥ್ಯ ನಿರ್ಮಾಣ ಮತ್ತು ಪ್ರಾಣಿಗಳ ಆರೈಕೆಯ ಮೂಲಸೌಕರ್ಯಗಳ ವಿಷಯದಲ್ಲಿ ಭಾರತದಲ್ಲಿನ ಎಲ್ಲ 150ಕ್ಕೂ ಹೆಚ್ಚು ಮೃಗಾಲಯಗಳನ್ನು ಸುಧಾರಿಸುವಲ್ಲಿ ಝೂ ಅಥಾರಿಟಿ ಆಫ್ ಇಂಡಿಯಾ ಮತ್ತು ಇತರ ಸಂಬಂಧಿತ ಸರ್ಕಾರಿ ಸಂಸ್ಥೆಗಳೊಂದಿಗೆ ಪಾಲುದಾರ ಆಗಲು ವಂತರಾ ಗುರಿ ಇರಿಸಿಕೊಂಡಿದೆ,'' ಎಂದಿದ್ದಾರೆ.

ವಂತಾರವನ್ನು ಸ್ಥಾಪಿಸಲು ಅವರನ್ನು ಪ್ರೇರೇಪಿಸಿದ ತತ್ವದ ಬಗ್ಗೆ ವಿವರಿಸಿರುವ ಅನಂತ್ ಅಂಬಾನಿ, ''ವಂತಾರ ಎಂಬುದು ಆಧುನಿಕ ವೈಜ್ಞಾನಿಕ ಮತ್ತು ತಾಂತ್ರಿಕ ವೃತ್ತಿಪರತೆಯ ಶ್ರೇಷ್ಠತೆಯೊಂದಿಗೆ ಸಹಾನುಭೂತಿಯ ಪ್ರಾಚೀನ ನೈತಿಕ ಮೌಲ್ಯದ ಸಂಯೋಜನೆಯಾಗಿದೆ. ನಾನು ಜೀವದ ಸೇವೆಯನ್ನು (ಪ್ರಾಣಿಗಳ ಆರೈಕೆ) ಭಗವಂತ ಮತ್ತು ಮಾನವೀಯತೆಯ ಸೇವೆಯಾಗಿ ನೋಡುತ್ತೇನೆ,'' ಎಂದಿದ್ದಾರೆ.

ವಂತಾರದ ಮೂಲಕವಾಗಿ ಪ್ರಾಣಿಗಳ ಸಂರಕ್ಷಣೆಗೆ ಅತ್ಯುತ್ಕೃಷ್ಟ ದರ್ಜೆಯ ವ್ಯವಸ್ಥೆ, ಅವುಗಳ ಆರೈಕೆಗೆ ಅತ್ಯುತ್ತಮ ಪದ್ಧತಿ ಅಳವಡಿಸಲಾಗಿದೆ. ಹೆಲ್ತ್ ಕೇರ್, ಆಸ್ಪತ್ರೆ, ಸಂಶೋಧನೆ ಹಾಗೂ ಶೈಕ್ಷಣಿಕ ಕೇಂದ್ರ ಸಹ ಇದೆ. ಇನ್ನು ಇದೇ ಕಾರ್ಯಕ್ರಮದ ಅಡಿಯಲ್ಲಿ ಉನ್ನತ ಮಟ್ಟದ ಸಂಶೋಧನೆ ಸಂಯೋಜನೆಗೆ, ಪ್ರತಿಷ್ಠಿತ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳು ಮತ್ತು ಇಂಟರ್ ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್ ಹಾಗೂ ವರ್ಲ್ಡ್ ವೈಲ್ಡ್ ಲೈಫ್ ಫಂಡ್ ಫಾರ್ ನೇಚರ್ ಜತೆಗಿನ ಸಹಭಾಗಿತ್ವದ ಮೇಲೆ ವಂತಾರ ಗಮನ ಕೇಂದ್ರೀಕರಿಸಿದೆ. ಕಳೆದ ಕೆಲವು ವರ್ಷಗಳಲ್ಲಿ ಈ ಕಾರ್ಯಕ್ರಮದ ಅಡಿಯಲ್ಲಿ ಇನ್ನೂರಕ್ಕೂ ಹೆಚ್ಚು ಆನೆಗಳು, ಸಾವಿರಾರು ಇತರ ಪ್ರಾಣಿಗಳು, ಸರೀಸೃಪಗಳು ಮತ್ತು ಹಕ್ಕಿಗಳನ್ನು ಅಸುರಕ್ಷಿತ ಸನ್ನಿವೇಶಗಳಿಂದ ರಕ್ಷಣೆ ಮಾಡಲಾಗಿದೆ. ಅಷ್ಟೇ ಅಲ್ಲ, ಘೇಂಡಾಮೃಗ, ಚಿರತೆ ಹಾಗೂ ಮೊಸಳೆಗಳಂಥ ಮುಖ್ಯ ಜೀವಿಗಳ ಪುನರ್ವಸತಿಗಾಗಿಯೂ ಉಪಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ವಂತಾರದ ಮೂಲಕ ಮೆಕ್ಸಿಕೋ, ವೆನಿಜುವೆಲಾ ಮುಂತಾದ ದೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸಲಾಗಿದೆ. ಸೆಂಟ್ರಲ್ ಅಮೆರಿಕನ್ ಝೂ ಅಧಿಕಾರಿಗಳ ಮನವಿ ಮೇರೆಗೆ ಇತ್ತೀಚೆಗೆ ಹಲವು ದೊಡ್ಡ ಪ್ರಾಣಿಗಳನ್ನು ತರಲಾಗಿದೆ. ಇನ್ನು ಇಂಥ ಪ್ರಾಣಿಗಳ ಸಂರಕ್ಷಣೆ ಮತ್ತು ಪುನರ್ವಸತಿ ಕಾರ್ಯಗಳನ್ನು ಭಾರತ ಹಾಗೂ ಅಂತಾರಾಷ್ಟ್ರೀಯ ಕಠಿಣ ಕಾನೂನು ಮತ್ತು ನಿಯಮಾವಳಿಗಳ ವ್ಯಾಪ್ತಿಯಲ್ಲೇ ಮಾಡಲಾಗಿದೆ.

ಮೂರು ಸಾವಿರ ಎಕರೆ ಪ್ರದೇಶದಲ್ಲಿ ಇನ್ನೂರಕ್ಕೂ ಹೆಚ್ಚು ಆನೆಗಳ ಕಾಳಜಿಯನ್ನು ಹಗಲಿರುಳು ಮಾಡಲಾಗುತ್ತಿದೆ. ಐನೂರಕ್ಕೂ ಹೆಚ್ಚು ತಜ್ಞರು, ಪರಿಣತರು, ತರಬೇತಿ ಪಡೆದಂಥ ಸಿಬ್ಬಂದಿ ಇದಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಇಪ್ಪತ್ತೈದು ಸಾವಿರ ಚದರಡಿ ವ್ಯಾಪ್ತಿಯಲ್ಲಿ ಆನೆಗಳಿಗಾಗಿಯೇ ಆಸ್ಪತ್ರೆಯಿದೆ. ಜಗತ್ತಿನ ಅತಿ ದೊಡ್ಡ ಪ್ರಾಣಿಗಳ ಆಸ್ಪತ್ರೆಯಲ್ಲಿ ಇದೂ ಒಂದು ಎನಿಸಿಕೊಂಡಿದೆ.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

**ಮೇಷ:** ವಿಪರೀತ ವ್ಯಸನ, ರೋಗಭಾದೆ, ಧನ ಲಾಭ, ತಿರುಗಾಟ, ಶತ್ರು ನಾಶ, ವಿದ್ಯಾರ್ಥಿಗಳಲ್ಲಿ ಪ್ರಗತಿ.

**ವೃಷಭ:** ವ್ಯವಹಾರಗಳಲ್ಲಿ ನಂಬಿಕೆ ದ್ರೋಹ, ಮಾತಿಗೆ ಮರುಳಾಗದಿರಿ, ಹಿರಿಯರ ಮಾತಿಗೆ ಗೌರವ.

**ಮಿಥುನ:** ಬೇಡದ ವಿಷಯಗಳಲ್ಲಿ ಆಸಕ್ತಿ, ಉದ್ಯೋಗ ಅವಕಾಶ, ಅಪಮಾನ.

**ಕಟಕ:** ಕೆಲಸ ಕಾರ್ಯಗಳು ಹಿನ್ನಡೆ, ಧಾರ್ಮಿಕ ಕಾರ್ಯಗಳಲ್ಲಿ ಭಾಗಿ, ಮಿತ್ರರಿಂದ ಸಹಾಯ, ಸಾಲಬಾಧೆ.

**ಸಿಂಹ:** ಮಕ್ಕಳೊಂದಿಗೆ ಪ್ರವಾಸ, ಪಾಲುದಾರಿಕೆಯಲ್ಲಿ ಲಾಭ, ಉದ್ಯೋಗದಲ್ಲಿ ಬಡ್ತಿ, ಅನಾರೋಗ್ಯ.

**ಕನ್ಯಾ:** ಕೃಷಿಕರಿಗೆ ಲಾಭ, ಹಣ ಬಂದರೂ ಉಳಿಯುವುದಿಲ್ಲ, ಕಾರ್ಯ ವಿಕಲ್ಪ, ಮನಸ್ಸಿನಲ್ಲಿ ಗೊಂದಲ.

**ತುಲಾ:** ಅಮೂಲ್ಯ ವಸ್ತುಗಳ ಖರೀದಿ, ಅನಾವಶ್ಯಕ ಮಾತುಗಳಿಂದ ದೂರವಿರಿ, ಪತಿ ಪತ್ನಿಯರಲ್ಲಿ ಪ್ರೀತಿ, ಕೋಪ ಜಾಸ್ತಿ.

**ವೃಶ್ಚಿಕ:** ರಾಜಕೀಯ ಕ್ಷೇತ್ರದಲ್ಲಿ ಗೊಂದಲ, ಶರೀರದಲ್ಲಿ ತಳಮಳ, ಸ್ವಂತ ಉದ್ಯಮಿಗಳಿಗೆ ಲಾಭ.

**ಧನಸ್ಸು:** ಯಾರನ್ನು ಹೆಚ್ಚಾಗಿ ನಂಬಬೇಡಿ, ಮನಸ್ಸಿನಲ್ಲಿ ಭಯಭೀತಿ ನಿವಾರಣೆ, ಆದಾಯ ಕಡಿಮೆ ಖರ್ಚು ಜಾಸ್ತಿ.

**ಮಕರ:** ಅಪರಿಚಿತರಿಂದ ಕಲಹ, ಅತಿಯಾದ ನಿದ್ರೆ, ವಾಹನ ಯೋಗ, ಸಂತಾನ ಪ್ರಾಪ್ತಿ, ತೀರ್ಥ ಯಾತ್ರೆಯ ದರ್ಶನ.

**ಕುಂಭ:** ಆಲಸ್ಯ ಮನೋಭಾವ, ನಾನಾ ರೀತಿಯ ಸಂಪಾದನೆ, ಗೆಳೆಯರಿಂದ ಸಹಾಯ, ವಿದ್ಯೆಯಲ್ಲಿ ಶ್ರದ್ಧೆ, ಸುಖ ಭೋಜನ.

**ಮೀನ:** ವೃತ್ತಿರಂಗದಲ್ಲಿ ಹೊಸ ಅವಕಾಶ, ಕೈಗೊಂಡ ಕೆಲಸಗಳಲ್ಲಿ ಜಯ, ಉನ್ನತ ಶಿಕ್ಷಣದಲ್ಲಿ ಉತ್ತಮ ಯಶಸ್ಸು.

## ವಿಶ್ವ ಎನ್‌ಜಿಒ ದಿನ




ವಿಶ್ವ NGO ದಿನವನ್ನು ಪ್ರತಿ ವರ್ಷ ಫೆಬ್ರವರಿ 27 ರಂದು ಆಚರಿಸಲಾಗುತ್ತದೆ. NGO ಸರ್ಕಾರೇತರ ಸಂಸ್ಥೆಯ ಸಂಕ್ಷಿಪ್ತ ರೂಪವಾಗಿದೆ. ವಿಶ್ವ ಎನ್‌ಜಿಒ ದಿನವು ಈ ಸ್ವತಂತ್ರ ಸಂಸ್ಥೆಗಳು ಪ್ರಪಂಚದ ಮೇಲೆ ಬೀರಿದ ಮೂಲಭೂತ ಕೊಡುಗೆಗಳು ಮತ್ತು ಆಳವಾದ ಪ್ರಭಾವವನ್ನು ಗುರುತಿಸಲು, ಆಚರಿಸಲು ಮತ್ತು ಗೌರವಿಸಲು ಮೀಸಲಿಟ್ಟ ದಿನವಾಗಿದೆ. NGOಗಳು ಲಾಭೋದ್ದೇಶವಿಲ್ಲದ ಸಂಸ್ಥೆಗಳಾಗಿವೆ ಮತ್ತು ಅವುಗಳು ಆಧುನಿಕ ವಿದ್ಯಮಾನವಾಗಿದ್ದರೂ, ಅವರ ಇತಿಹಾಸವು ನೂರಾರು ವರ್ಷಗಳ ಹಿಂದೆ ವ್ಯಾಪಿಸಿದೆ. ಇಂದಿನ ಜಗತ್ತಿನಲ್ಲಿ ಅಗತ್ಯವಿರುವಲ್ಲಿ ಅವರ ಪ್ರಭಾವವು ಬೆಳೆಯುತ್ತಲೇ ಇದೆ ಮತ್ತು ಧನಾತ್ಮಕ ಬದಲಾವಣೆಗಳನ್ನು ಮಾಡುತ್ತಿದೆ. ವಿಶ್ವ ಎನ್ಜಿಒ ದಿನವನ್ನು ಮೂಲತಃ 2009 ರಲ್ಲಿ ಸಾಮಾಜಿಕ ಉದ್ಯಮಿ ಮಾರ್ಸಿಸ್ ಲಿಯರ್ಸ್ ಸ್ಕದ್ಮನಿಸ್ ಸ್ಥಾಪಿಸಿದರು. ಆದಾಗ್ಯೂ, ಇದನ್ನು ಮೊದಲ ಬಾರಿಗೆ ಫೆಬ್ರವರಿ 27, 2014 ರಂದು ಆಚರಿಸಲಾಯಿತು. ಇದು ಎಲ್ಲಾ ಸರ್ಕಾರೇತರ ಮತ್ತು ಲಾಭೋದ್ದೇಶವಿಲ್ಲದ ಸಂಸ್ಥೆಗಳನ್ನು ಗೌರವಿಸಲು ಮೀಸಲಿಟ್ಟ ದಿನವಾಗಿದೆ, ಪ್ರಪಂಚದ ಮೇಲೆ ಅವರ ಪ್ರಭಾವವನ್ನು ಗುರುತಿಸುತ್ತದೆ. ಬಾಲ್ಟಿಕ್ ಸಮುದ್ರದ ಎನ್‌ಜಿಒ ಫೋರಮ್ನ 12 ಸದಸ್ಯ ರಾಷ್ಟ್ರಗಳಿಂದ 2010 ರಲ್ಲಿ ಅಧಿಕೃತವಾಗಿ ರಜಾದಿನವನ್ನು ಘೋಷಿಸಲಾಯಿತು, ಇದನ್ನು ಕೌನ್ಸಿಲ್ ಆಫ್ ಬಾಲ್ಟಿಕ್ ಸೀ ಸ್ಟೇಟ್ಸ್ನ ಪಾಲುದಾರ ಎಂದು ಗುರುತಿಸಲಾಗಿದೆ. ಆದಾಗ್ಯೂ, ಇದು ಯುರೋಪಿಯನ್ ಒಕ್ಕೂಟ, ವಿಶ್ವಸಂಸ್ಥೆ ಮತ್ತು ಇತರ ಅಂತರರಾಷ್ಟ್ರೀಯ ಸಂಸ್ಥೆಗಳಿಂದ 2014 ರಲ್ಲಿ ಮಾತ್ರ ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆಯಿತು.ಒಂದು ಎನ್.ಜಿ.ಓ. ಯುನೈಟೆಡ್ ನೇಷನ್ಸ್ ಡಿಪಾರ್ಟ್ಮೆಂಟ್ ಆಫ್ ಗ್ಲೋಬಲ್ ಕಮ್ಯುನಿಕೇಷನ್ಸ್ ಇದನ್ನು ಲಾಭಕ್ಕಾಗಿ ಅಲ್ಲ, ಸ್ವಯಂಪ್ರೇರಿತ ನಾಗರಿಕರ ಗುಂಪು ಸಾರ್ವಜನಿಕ ಒಳಿತಿಗಾಗಿ ಬೆಂಬಲಿಸುವ ಸಮಸ್ಯೆಗಳನ್ನು ಪರಿಹರಿಸಲು ಸ್ಥಳೀಯ, ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಥಾಪಿಸಲಾಗಿದೆ ಎಂದು ವ್ಯಾಖ್ಯಾನಿಸಿದೆ.NGOಗಳು 18 ನೇ ಶತಮಾನದಷ್ಟು ಹಿಂದಿನದಾದರೂ, 1945 ರ ವಿಶ್ವಸಂಸ್ಥೆಯ ಚಾರ್ಟರ್, ಆರ್ಟಿಕಲ್ 71 ರ ಮೂಲಕ 'ಸರ್ಕಾರಿ?ತರ ಸಂಸ್ಥೆ' ಎಂಬ ಹೆಸರನ್ನು ರಚಿಸಲಾಗಿದೆ. NGOಗಳ ವಿಶಿಷ್ಟ ಅಂಶವೆಂದರೆ ಸರ್ಕಾರದಿಂದ ಅವರ ಸ್ವಾತಂತ್ರ್ಯ. NGOಗಳು ಅನುದಾನಗಳು, ಖಾಸಗಿ ದೇಣಿಗೆಗಳು, ಸದಸ್ಯತ್ವ ಬಾಕಿಗಳು, ಉತ್ಪನ್ನ ಮಾರಾಟಗಳು ಮತ್ತು ಕೆಲವೊಮ್ಮೆ ಸರ್ಕಾರಿ ದೇಣಿಗೆಗಳ ಮೂಲಕ ಖಾಸಗಿಯಾಗಿ ಹಣವನ್ನು ನೀಡಲಾಗುತ್ತದೆ. ಮೊದಲನೆಯದು ಅಭಿವೃದ್ಧಿ-ಸಂಬಂಧಿತ ಯೋಜನೆಗಳನ್ನು ವಿನ್ಯಾಸಗೊಳಿಸುವ ಮತ್ತು ಕಾರ್ಯಗತಗೊಳಿಸುವುದರ ಮೇಲೆ ಕೇಂದ್ರೀಕರಿಸುತ್ತದೆ ಆದರೆ ವಕಾಲತ್ತು NGOಗಳು ಸಾರ್ವಜನಿಕ ನೀತಿಯ ಮೇಲೆ ಪರಿಣಾಮ ಬೀರುವ ನಿರ್ದಿಷ್ಟ ಕಾರಣಗಳನ್ನು ಉತ್ತೇಜಿಸುತ್ತವೆ.ಯುನೈಟೆಡ್ ಸ್ಟೇಟ್ಸ್ನಲ್ಲಿ ಈಗ ಸರಿಸುಮಾರು 1.5 ಮಿಲಿಯನ್ NGOಗಳು ಅಸ್ತಿತ್ವದಲ್ಲಿವೆ.

# ಲಿಂಗ ಸಮಾನತೆಯೆಂದರೆ ಕ್ರೌರ್ಯದಲ್ಲಿ ಸಮಾನರಾಗುವುದಲ್ಲ: ಸ್ಮೃತಿ ಇರಾನಿ



**ನವದೆಹಲಿ:** ಜನಸಂಖ್ಯೆಯ ಶೇಕಡಾ 50ರಷ್ಟಿರುವ ಮಹಿಳೆಯರು ಭಾರತದ ಬೆಳವಣಿಗೆಗೆ ಪ್ರಮುಖ ಕೊಡುಗೆದಾರರಾಗಿದ್ದು, ಅವರನ್ನು ನಿರ್ಬಂಧಿಸುವ ಬದಲು ಹುಡುಗರಿಗೆ ಕಲಿಸುವ ಸಮಯ ಬಂದರೂ, ಪುರುಷರಿಗೆ ಥಳಿಸುವುದು ಲಿಂಗ ಸಮಾನತೆ ಎಂದು ಕರೆಸಿಕೊಳ್ಳುವುದಿಲ್ಲ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ, 'ವಾಟ್ ಇಂಡಿಯಾ ಥಿಂಕ್ಸ್ ಟುಡೇ? ಗ್ಲೋಬಲ್ ಶೃಂಗಸಭೆಯ 2024ರ ಆವೃತ್ತಿಯಲ್ಲಿ ಹೇಳಿದ್ದಾರೆ.ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕಾದರೆ ಲಿಂಗ ಸಮಾನತೆ ಅತಿ ಮುಖ್ಯ. ಸಮಾನತೆಯ ಘೋಷವಾಕ್ಯವಾಗಿ ಮಹಿಳಾ ಸಬಲೀಕರಣದಿಂದ ಪ್ರಗತಿಯ ಸಂಕೇತವಾಗಿ ಮಹಿಳಾ ಸಾಧನೆಗೆ ನಿರೂಪಣೆ ಬದಲಾಗಬೇಕು ಎಂದು ಹೇಳಿದ ಅವರು, ಲಿಂಗ ಸಮಾನತೆಯ ಹೆಸರಿನಲ್ಲಿ ಪುರುಷರನ್ನು ಹೊಡೆಯುವುದು ಸೂಕ್ತವೆಂದು ನಾನು ಭಾವಿಸುವುದಿಲ್ಲ ಎಂದರು. ಅಮೇರಿಕದಲ್ಲಿರುವ ಗಾಜಿನ ಚಾವಣಿಯ ಕಲ್ಪನೆ ಭಾರತದಲ್ಲಿಲ್ಲ. ಭಾರತವು ಈಗಾಗಲೇ ಮಹಿಳೆಯರು ಮತ್ತು ಸಮಾಜದಲ್ಲಿ ಅವರ ನಿಲುವಿಗೆ ಸಂಬಂಧಿಸಿದಂತೆ ಮೈಲುಗಲ್ಲುಗಳನ್ನು ದಾಟಿತ್ತು ಎಂದು ಅವರು ಅಭಿಪ್ರಯಪಟ್ಟಿದ್ದಾರೆ. ಅಧಿಕಾರಿಯಿಂದ ಮಹಿಳೆ ಕಿರುಕುಳಕ್ಕೊಳಗಾದರೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸಾವಿರಾರು ವರ್ಷಗಳ ಹಿಂದೆ ಬರೆಯಲಾದ 'ಅರ್ಥಶಾಸ್ತ್ರ'ದಲ್ಲಿ ದಾಖಲಿತವಾಗಿರುವ ಬಗ್ಗೆಯೂ ಮತನಾಡಿದ ಇರಾನಿ, ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಲಕ್ಷ್ಮೀಬಾಯಿಯನ್ನು ನಾರಿಶಕ್ತಿಯ ಸ್ವರೂಪವಾಗಿ ನೆನಪಿಸಿದರು.

# 53,000 ಡಾಲರ್ ಗಡಿ ದಾಟಿದ ಬಿಟ್ ಕಾಯಿನ್

**ದೆಹಲಿ:** ಎಕ್ಸ್ಚೇಂಜ್-ಟ್ರೇಡೆಡ್ ಫಂಡ್ ಗಳ (ಇಟಿಎಫ್) ಮೂಲಕ ನಿರಂತರ ಹೂಡಿಕೆದಾರರ ಬೇಡಿಕೆಯ ಬಗ್ಗೆ ಹೆಚ್ಚುತ್ತಿರುವ ಆಶಾವಾದದಿಂದಾಗಿ ಬಿಟ್ಕಾಯಿನ್ ಎರಡು ವರ್ಷಗಳಲ್ಲಿ ಗರಿಷ್ಠ ಹಂತವನ್ನು ತಲುಪಿದೆ, 53,000 ಡಾಲರ್ ಮೀರಿದೆ ಎಂದು ಬ್ಲೂಮ್ಬರ್ಗ್ ವರದಿ ಮಾಡಿದೆ. ಕ್ರಿಪ್ಟೋ ಹೂಡಿಕೆ ಸಂಸ್ಥೆ ಜಿಎಸ್ ಆರ್ ನ ಓವರ್-ದಿ-ಕೌಂಟರ್ ಟ್ರೇಡಿಂಗ್ ನ ಜಾಗತಿಕ ಮುಖ್ಯಸ್ಥ ಸ್ಪೆನ್ಸರ್ ಹಲ್ಲಾರ್ನ್, ಕ್ರಿಪ್ಟೋಕರೆನ್ಸಿಗಳ ಆರೋಹಣವು ಬಲವಾದ ಇಟಿಎಫ್ ಒಳಹರಿವಿನಿಂದ ಬೆಂಬಲಿತವಾಗಿದೆ ಎಂದು ಪ್ರಕಟಣೆಗೆ ತಿಳಿಸಿದರು. ವಿಶ್ವದ ಅತಿದೊಡ್ಡ ಕ್ರಿಪ್ಟೋಕರೆನ್ಸಿ ಶೇಕಡಾ 3.5 ರಷ್ಟು ಏರಿಕೆ ಕಂಡು 53,600 ಡಾಲರ್ಗೆ ತಲುಪಿದೆ. ಇದು ಕೊನೆಯ ಬಾರಿಗೆ ಡಿಸೆಂಬರ್ 2021 ರಲ್ಲಿ ಈ ಮಟ್ಟದಲ್ಲಿ ವಹಿವಾಟು ನಡೆಸಿತು, ಹಿಂದಿನ ತಿಂಗಳು ಸುಮಾರು 69,000 ಡಾಲರ್ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ಸಾಧಿಸಿತು.



ಕಳೆದ ತಿಂಗಳಲ್ಲಿ, ಹೂಡಿಕೆದಾರರು ಹೊಸದಾಗಿ ಪ್ರಾರಂಭಿಸಿದ ಒಂಬತ್ತು ಇಟಿಎಫ್ ಗಳಲ್ಲಿ 5 ಬಿಲಿಯನ್ ಡಾಲರ್ ಹಂಚಿಕೆ ಮಾಡಿದ್ದಾರೆ. ಈ ಮೊತ್ತವು ಗ್ರೇಸ್ಕೇಲ್ ಬಿಟ್ಕಾಯಿನ್ ಟ್ರಸ್ಟ್ನಿಂದ ಹಿಂತೆಗೆದುಕೊಂಡ 7.4 ಬಿಲಿಯನ್ ಡಾಲರ್ ಅನ್ನು ಪರಿಗಣಿಸುತ್ತದೆ, ಇದು ಅದೇ ಅವಧಿಯಲ್ಲಿ ಟ್ರಸ್ಟ್ನಿಂದ ಪರಿವರ್ತನೆಗೆ ಒಳಗಾಯಿತು.

# ಸಾರ್ವಜನಿಕವಾಗಿ ಗುಂಡಿಕ್ಕಿ ಅಪರಾಧಿಯ ಹತ್ಯೆ!

**ಕಾಬೂಲ್:** ಅಫ್ಘಾನಿಸ್ಥಾನದ ಉತ್ತರ ಜಾವಾನ್ ಪ್ರಾಂತದ ಶಿಬಿರ್ಘಾನ್ ನಗರದ ಕ್ರೀಡಾಂಗ ಣವೊಂದರಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ಕೊಲೆಗಾರನೊಬ್ಬನನ್ನು ಸಾರ್ವಜನಿಕವಾಗಿ ಗುಂಡಿಕ್ಕಿ ಹತ್ಯೆಗೈಯ್ಯಲಾಗಿದೆ. ಇದು ಅಫ್ಘಾನ್ನಲ್ಲಿ ಕಳೆದ 5 ದಿನಗಳಲ್ಲಿ ನಡೆದ 3ನೇ ಮರಣದಂಡನೆ ಪ್ರಕರಣ ಇದಾಗಿದೆ. ಕ್ರೀಡಾಂಗಣದ ಸುತ್ತಲೂ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿತ್ತು. ನಾಜರ್ ಮೊಹಮ್ಮದ್ ಎಂಬಾತನೇ ಮರಣದಂಡನೆಗೆ ಗುರಿಯಾದ ವ್ಯಕ್ತಿ. ಕೊಲೆ ಪ್ರಕರಣದಲ್ಲಿ ಈತನಿಗೆ ಮರಣದಂಡನೆ ಘೋಷಿಸಲಾಗಿತ್ತು. ಕೊಲೆಯಾದ ವ್ಯಕ್ತಿಯ ಸಹೋದರನೇ ಶಿಕ್ಷೆಯ ದಿನವಾದ ಸೋಮವಾರ ಸಾವಿರಾರು ಮಂದಿಯ ಸಮ್ಮುಖದಲ್ಲಿ 5 ಸುತ್ತು ಗುಂಡು ಹಾರಿಸಿ ಅಪರಾಧಿ ನಾಜರ್ ಮೊಹಮ್ಮದ್ನನ್ನು ಕೊಂದಿದ್ದಾನೆ. ಗುರುವಾರವಷ್ಟೇ ತಾಲಿಬಾನ್ ಸರಕಾರವು ಹತ್ಯೆ ಪ್ರಕರಣದ ಇಬ್ಬರು ಅಪರಾಧಿಗಳನ್ನು ಸಾರ್ವಜನಿಕವಾಗಿ ಗುಂಡಿಕ್ಕಿ ಕೊಲ್ಲಲಾಗಿತ್ತು.

# ಪೇಟಿಎಂ :ಅಧ್ಯಕ' ಸಾನಕ್ಕೆ 'ವಿಜಯ್ ಶೇಖರ್ ಶರ್ಮಾ' ರಾಜೀನಾಮೆ



**ನವದೆಹಲಿ:** ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ (ಪಿಪಿಬಿಎಲ್) ಫೆಬ್ರವರಿ 26 ರಂದು ವಿಜಯ್ ಶೇಖರ್ ಶರ್ಮಾ ಮಂಡಳಿಗೆ ರಾಜೀನಾಮೆ ನೀಡಿದ್ದಾರೆ. ಪಿಪಿಬಿಎಲ್ ಮಂಡಳಿಯನ್ನು ಪುನರ್ ರಚಿಸಲಾಗಿದೆ ಎಂದು ಒನ್ 97 ಕಮ್ಯುನಿಕೇಷನ್ಸ್ ಷೇರು ಮಾರುಕಟ್ಟೆ ಮಂಡಳಿಗೆ ಮಾಹಿತಿ ನೀಡಿದೆ. ವಿಜಯ್ ಶೇಖರ್ ಶರ್ಮಾ ಅವರು ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಮಂಡಳಿಗೆ ರಾಜೀನಾಮೆ ನೀಡಿದ್ದಾರೆ. ಹೊಸ ಅಧ್ಯಕ್ಷರನ್ನು ನೇಮಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸುವುದಾಗಿ ಪಿಪಿಬಿಎಲ್ ನಮಗೆ ತಿಳಿಸಿದೆ ಎಂದು ಒಸಿಎಲ್ ತಿಳಿಸಿದೆ. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಮಾಜಿ ಅಧ್ಯಕ್ಷ ಶ್ರೀನಿವಾಸನ್ ಶ್ರೀಧರ್, ನಿವೃತ್ತ ಐಎಎಸ್ ಅಧಿಕಾರಿ ದೇಬೇಂದ್ರನಾಥ್ ಸಾರಂಗಿ, ಬ್ಯಾಂಕ್ ಆಫ್ ಬರೋಡಾದ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಅಶೋಕ್ ಕುಮಾರ್ ಗರ್ಗ್ ಮತ್ತು ನಿವೃತ್ತ ಐಎಎಸ್ ರಜನಿ ಸೆಖ್ರಿ ಸಿಬಲ್ ಅವರು ಪಿಪಿಬಿಎಲ್ ಮಂಡಳಿಗೆ ಸೇರಿದ್ದಾರೆ ಎಂದು ಒನ್ 97 ಕಮ್ಯುನಿಕೇಷನ್ಸ್ ಲಿಮಿಟೆಡ್ ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿದೆ. ಅವರು ಸ್ವತಂತ್ರ ನಿರ್ದೇಶಕರಾಗಿ ಸೇರಿಕೊಂಡಿದ್ದಾರೆ. ಒಸಿಎಲ್ ತನ್ನ ನಾಮನಿರ್ದೇಶಿತರನ್ನು ತೆಗೆದುಹಾಕುವ ಮೂಲಕ ಸ್ವತಂತ್ರ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರನ್ನು ಮಾತ್ರ ಹೊಂದಿರುವ ಮಂಡಳಿಯನ್ನು ಆಯ್ಕೆ ಮಾಡುವ ಪಿಪಿಬಿಎಲ್ನ ಕ್ರಮವನ್ನು ಬೆಂಬಲಿಸುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

# ದೇಹ ಗಟ್ಟಿಯಾಗಿರಲೆಂದು 39 ನಾಣ್ಯ, 37 ಅಯಸ್ಕಾಂತ ನುಂಗಿದ ವ್ಯಕ್ತಿ!

**ನವದೆಹಲಿ:** ಸತು ದೇಹವನ್ನು ಸದೃಢವಾಗಿಸುತ್ತದೆ ಎಂದು ನಾಣ್ಯಗಳು ಹಾಗೂ ಅಯಸ್ಕಾಂತಗಳನ್ನು ನುಂಗಿದ್ದ ವ್ಯಕ್ತಿಯೊಬ್ಬನ ಹೊಟ್ಟೆಯಿಂದ ಸುಮಾರು 39 ನಾಣ್ಯಗಳು ಮತ್ತು 37 ಅಯಸ್ಕಾಂತಗಳನ್ನು ವೈದ್ಯರು ಹೊರತೆಗೆದಿದ್ದಾರೆ. ದೆಹಲಿಯ 26 ವರ್ಷದ ರೋಗಿಯೊಬ್ಬರು 20 ದಿನಗಳಿಗೂ ಹೆಚ್ಚು ಕಾಲ ಪದೇ ಪದೇ ವಾಂತಿ ಮತ್ತು ಹೊಟ್ಟೆ ನೋವಿನ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗಿದ್ದರು. ರೋಗಿ ಏನನ್ನು ತಿನ್ನದೇ ಇದ್ದಾಗ ಅನುಮಾನಗೊಂಡು ವೈದ್ಯರು, ಎಕ್ಸ್ ರೇ ಮಾಡಿ ನೋಡಿದಾಗ ನಾಣ್ಯಗಳು ಹಾಗೂ ಅಯಸ್ಕಾಂತಗಳು ಕರುಳಿನಲ್ಲಿ ಇರುವುದು ಬೆಳಕಿಗೆ ಬಂದಿದೆ. ಬಳಿಕ ವೈದ್ಯರು ಶಸ್ತ್ರಚಿಕಿತ್ಸೆ ಮೂಲಕ ಅವುಗಳನ್ನು ಹೊರಗೆ ತೆಗೆದಿದ್ದಾರೆ. ವ್ಯಕ್ತಿಯ ಹೊಟ್ಟೆಯಿಂದ 1, 2, 5 ರೂ.ಗಳ ನಾಣ್ಯಗಳು ಮತ್ತು ಹೃದಯ, ಗೋಳ, ನಕ್ಷತ್ರ, ಬುಲೆಟ್ ಮತ್ತು ತ್ರಿಕೋನ ಆಕಾರದ ಅಯಸ್ಕಾಂತಗಳನ್ನು ಹೊರತೆಗೆಯಲಾಗಿದೆ. ಈ ಹಿಂದೆಯೂ ರೋಗಿಗಳು ಅಯಸ್ಕಾಂತ ಹಾಗೂ ನಾಣ್ಯಗಳನ್ನು ಸೇವಿಸಿದ ಸಾಕಷ್ಟು ಉದಾಹರಣೆಗಳಿವೆ ಎಂದು ಚಿಕಿತ್ಸೆ ನೀಡಿದ ವೈದ್ಯರಾದ ಡಾ.ತರುಣ್ ಮಿತ್ತಲ್ ಹೇಳಿದ್ದಾರೆ.ನಾಣ್ಯವನ್ನು ನುಂಗಿದ ವ್ಯಕ್ತಿಯು, ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದು, ದೇಹ ಗಟ್ಟಿಯಾಗುತ್ತದೆ ಎಂದು ನಾಣ್ಯಗಳು ಮತ್ತು ಅಯಸ್ಕಾಂತಗಳನ್ನು ನುಂಗಿದ್ದಾನೆ ಎಂದು ತಿಳಿದು ಬಂದಿದೆ.

# ಶ್ರೀಕೃಷ್ಣನಿಗೆ ಮೋದಿ ನವಿಲು ಗರಿ ಅರ್ಪಣೆ: ಖರ್ಗೆ ವ್ಯಂಗ್ಯ

**ಕಲಬುರಗಿ:** ಪ್ರಧಾನಿ ಮೋದಿ ಅವರು ದ್ವಾರಕಾಕ್ಕೆ ತೆರಳಿ ನವಿಲು ಗರಿ ಸಮರ್ಪಿಸುವು ಮೂಲಕ ಶ್ರೀಕೃಷ್ಣನಿಗೆ ವಿಶೇಷ ಪಾರ್ಥನೆ ಸಲ್ಲಿದ್ದು, ಇದೀಗ ಇದಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಲೇವಡಿ ಮಾಡಿದ್ದಾರೆ. ನಗರದಲ್ಲಿ ಮಾತನಾಡಿರುವ ಖರ್ಗೆ, ನವಿಲುಗರಿ ಅಲ್ಲಿ ಹಾಕಿದರೆ ಬೆಳೆಯುತ್ತೋ ಇಲ್ಲವೋ ಗೊತ್ತಿಲ್ಲ. ನಿಸರ್ಗದ ನಿಯಮದ ಪ್ರಕಾರ ನವಿಲುಗರಿ ಬೆಳೆಯುತ್ತಾ ಗೊತ್ತಿಲ್ಲ. ನಾನು ನಂಬಿರುವ ನಿಸರ್ಗದ ನಿಯಮದ ಪ್ರಕಾರ ನಡೆಯಬೇಕು. ನಿಸರ್ಗದ ವಿರುದ್ಧ ಹೋದವರಿಗೆ ಯಶಸ್ಸು ಸಿಗಲ್ಲ. ಇದು ಬುದ್ಧನ ತತ್ವ ಎಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಗುಜರಾತ್ ಭೇಟಿಯ ಎರಡನೇ ದಿನದ ಈ ಸಮಯದಲ್ಲಿ, ಸ್ಕೂಬಾ ಡೈವಿಂಗ್ ಮುಖಾಂತರ ಆಳವಾದ ಸಮುದ್ರಕ್ಕಿಳಿದು ಮುಳುಗಡೆಯಾಗಿದ್ದ ಪ್ರಾಚೀನಾ ದ್ವಾರಕೆಗೆ ಪ್ರಾರ್ಥನೆ ಸಲ್ಲಿಸಿದ್ದಾರೆ. ಬಳಿಕ ಈ ಕುರಿತು ಟ್ವೀಟ್ ಮಾಡಿರುವ ಮೋದಿ, ನೀರಿನಲ್ಲಿ ಮುಳುಗಿ ದ್ವಾರಕಾ ನಗರದಲ್ಲಿ ಪ್ರಾರ್ಥನೆ ಮಾಡುವುದು ನನಗೆ ಒಲಿದ ಅತ್ಯಂತ ದಿವ್ಯ ಹಾಗೂ ಸುಂದರ ಅನುಭವವಾಗಿತ್ತು ಎಂದಿದ್ದಾರೆ.




# ಪಕ್ಷಾಂತರ; 8 ಶಾಸಕರ ಅನರ್ಹಗೊಳಿಸಿದ ಆಂಧ್ರಪ್ರದೇಶ ವಿಧಾನಸಭಾ ಸ್ಪೀಕರ್

**ಅಮರಾವತಿ:** ಆಂಧ್ರಪ್ರದೇಶ ವಿಧಾನಸಭೆಯ ಸ್ಪೀಕರ್ ತಮ್ಮಿನೇನಿ ಸೀತಾರಾಮ್ ಅವರು ಪಕ್ಷಾಂತರದ ವಿರುದ್ಧ ನಿರ್ಣಾಯಕ ನಿಲುವು ತೆಗೆದುಕೊಂಡಿದ್ದು, 8 ಶಾಸಕರನ್ನು ಅನರ್ಹಗೊಳಿಸಿದ್ದಾರೆ.ಯುವಜನ ಶ್ರಮಿಕ ರೈತ ಕಾಂಗ್ರೆಸ್ ಪಕ್ಷ (ವೈಎಸ್ಆರ್ಸಿಪಿ) ಸಲ್ಲಿಸಿದ ಅರ್ಜಿಯ ಮೇರೆಗೆ ಮುಖ್ಯಮಂತ್ರಿ ಕಚೇರಿ ಅಧಿಕೃತ ಪ್ರಕಟಣೆಯ ಪ್ರಕಾರ, ಅನರ್ಹಗೊಂಡ ಸದಸ್ಯರಲ್ಲಿ




ಆನಂ ರಾಮನಾರಾಯಣ ರೆಡ್ಡಿ, ಮೇಕಪತಿ ಚಂದ್ರಶೇಖರ್ ರೆಡ್ಡಿ, ಕೋಟಂ ರೆಡ್ಡಿ ಶ್ರೀಧರ್ ರೆಡ್ಡಿ ಮತ್ತು ಉಂಡವಳ್ಳಿ ಶ್ರೀದೇವಿ ಸೇರಿದ್ದಾರೆ. ಮುಖ್ಯಮಂತ್ರಿ ಕಚೇರಿ ಪ್ರಕಟಣೆ ಪ್ರಕಾರ, ಉಲ್ಲೇಖಿಸಲಾದ ಶಾಸಕರ ವಿರುದ್ಧ ವೈಎಸ್ಆರ್ ಸಿಪಿಯ ಅರ್ಜಿಯಲ್ಲಿ ಸಲ್ಲಿಸಲಾದ ಆರೋಪಗಳು ಮತ್ತು ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಅನರ್ಹತೆ ನಿರ್ಧಾರಕ್ಕೆ ಬರಲಾಗಿದೆ. ಅನರ್ಹಗೊಂಡ ಸದಸ್ಯರು ಪಕ್ಷದ ಶಿಸ್ತು ಉಲ್ಲಂಘಿಸಿದ್ದಾರೆ. ಪಕ್ಷದ ತತ್ವಗಳಿಗೆ ವಿರುದ್ಧವಾದ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಆರೋಪಿಸಲಾಗಿದೆ. ಇದಲ್ಲದೇ, ತೆಲುಗು ದೇಶಂ ಪಕ್ಷ (ಟಿಡಿಪಿ) ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ ಮದ್ದಲಗಿರಿ, ಕರಣಂ ಬಲರಾಮ್, ವಲ್ಲಭನೇನಿ ವಂಶಿ ಮತ್ತು ವಾಸುಪಲ್ಲಿ ಗಣೇಶ್ ಅನರ್ಹಗೊಂಡಿದ್ದಾರೆ. ಟಿಡಿಪಿ ಕೂಡ ತನ್ನ ಶಾಸಕರ ವಿರುದ್ಧ ಇದೇ ಆರೋಪ ಮಾಡಿದೆ



# ಭಾರತವು ಸಣ್ಣದಾಗಿ ಯೋಚಿಸುವುದನ್ನು ನಿಲ್ಲಿಸಿದೆ : ಪ್ರಧಾನಿ ನರೇಂದ್ರ ಮೋದಿ

ನವದೆಹಲಿ : 21 ನೇ ಶತಮಾನದ ಭಾರತವು ಸಣ್ಣದಾಗಿ ಯೋಚಿಸುವುದನ್ನು ನಿಲ್ಲಿಸಿದೆ. ಭಾರತದ ಸಾಧನೆಗಳನ್ನು ನೋಡಿ ಜಗತ್ತು ಆಶ್ಚರ್ಯಚಕಿತವಾಗಿದೆ. ಭಾರತದೊಂದಿಗೆ ನಡೆಯುವುದರಿಂದ ಆಗುವ ಪ್ರಯೋಜನವನ್ನು ಜಗತ್ತು ನೋಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಸೋಮವಾರ (ಫೆಬ್ರವರಿ 26, 2024) ನಡೆದ ನ್ಯೂಸ್ 9 ಜಾಗತಿಕ ಶೃಂಗಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ನಮ್ಮ ಮನಸ್ಥಿತಿ (ಆಲೋಚನಾ ವಿಧಾನ) ಬದಲಾವಣೆಯನ್ನು ತೋರಿಸಿದೆ. ಈಗ ಪ್ರತಿಯೊಬ್ಬ ಭಾರತೀಯನು ತಾನು ಏನು ಬೇಕಾದರೂ ಮಾಡಬಹುದು ಮತ್ತು ಅಸಾಧ್ಯವಾದುದು ಯಾವುದೂ ಇಲ್ಲ ಎಂದು ಭಾವಿಸುತ್ತಾನೆ ಎಂದರು.

ತಮ್ಮ ನೇತೃತ್ವದ ಎನ್ಡಿಎ ಸರ್ಕಾರದ 10 ವರ್ಷಗಳಲ್ಲಿ 640 ಬಿಲಿಯನ್ ಡಾಲರ್ ವಿದೇಶಿ ಹೂಡಿಕೆ ಭಾರತಕ್ಕೆ ಬಂದಿದೆ ಎಂದು ಪ್ರಧಾನಿ ಮೋದಿ ಹೇಳಿದರು. ಮೊದಲ, ಎರಡನೇ ಮತ್ತು ಮೂರನೇ ಕೈಗಾರಿಕಾ ಕ್ರಾಂತಿಯಲ್ಲಿ ನಾವು ಹಿಂದುಳಿದಿದ್ದೇವೆ ಎಂದು ಪ್ರಧಾನಿ ಮೋದಿ ಹೇಳಿದರು. ನಾಲ್ಕನೇ ಕೈಗಾರಿಕಾ ಕ್ರಾಂತಿಯಲ್ಲಿ ನಾವು ಜಗತ್ತನ್ನು ಮುನ್ನಡೆಸಬೇಕಾಗಿದೆ. ನಾವು ಗರೀಬಿ ಹಟಾವೋ ಘೋಷಣೆಯನ್ನು ಮಾತ್ರ ಕೇಳಿದ್ದೆವು ಆದರೆ ನಮ್ಮ ಸರ್ಕಾರವು ಹೆಚ್ಚಿನ ಸಂಖ್ಯೆಯ ಜನರನ್ನು ಬಡತನ ರೇಖೆಯಿಂದ ಹೊರಗಿಟ್ಟಿತು ಎಂದು ಹೇಳಿದರು.

# ನಕಲಿ ಕರೆ ನಿಗ್ರಹಕ್ಕೆ ಟ್ರೂ ಕಾಲರ್ ಆರಂಭ




**ದೆಹಲಿ:** ಕೇಂದ್ರ ಸರ್ಕಾರವು ಮೊಬೈಲ್ ಬಳಕೆದಾರರಿಗೆ ಗುಡ್ ನ್ಯೂಸ್ ನೀಡಿದ್ದು, ನಕಲಿ ಕರೆ ನಿಗ್ರಹಕ್ಕೆ ಟ್ರೂ ಕಾಲರ್? ಆರಂಭ ಮಾಡಿದೆ. ಶೀಘ್ರದಲ್ಲೇ ಕರೆ ಮಾಡಿದವರ ನಿಜವಾದ ಹೆಸರು ನಿಮ್ಮ ಮೊಬೈಲ್ ನಲ್ಲಿರುವ ಸಂಖ್ಯೆಯೊಂದಿಗೆ ಬರುತ್ತದೆ. ಈ ರೀತಿಯಾಗಿ, ನಕಲಿ ಕರೆಗಳನ್ನು ನಿಗ್ರಹಿಸಲಾಗುತ್ತದೆ. ಈ ನಿಟ್ಟಿನಲ್ಲಿ, ಟ್ರಾಯ್ 29.11.2022 ರಂದು 'ಟೆಲಿಕಾಂ ನೆಟ್ವರ್ಕ್ಗಳಲ್ಲಿ ಕರೆ ಮಾಡುವ ಹೆಸರು ಪ್ರಸ್ತುತಿ (ಸಿಎನ್ಎಪಿ) ಪರಿಚಯ' ಕುರಿತು ಸಮಾಲೋಚನಾ ಪತ್ರವನ್ನು ಬಿಡುಗಡೆ ಮಾಡಿತ್ತು. ಇದು ಎಲ್ಲಾ ಮಧ್ಯಸ್ಥಗಾರರಿಂದ ಪ್ರತಿಕ್ರಿಯೆಗಳನ್ನು ಕೋರಿತು. ಇದಕ್ಕಾಗಿ, ಸಮಾಲೋಚನಾ ಕಾಗದದ ಮೇಲೆ ಮುಕ್ತ ಸದನದ ಚರ್ಚೆಯನ್ನು 09.03.2023 ರಂದು ವರ್ಚುವಲ್ ಮೋಡ್ ಮೂಲಕ ನಡೆಸಲಾಯಿತು.ಮಧ್ಯಸ್ಥಗಾರರಿಂದ ಪಡೆದ ಪ್ರತಿಕ್ರಿಯೆಗಳು / ಒಳಹರಿವುಗಳು ಮತ್ತು ತನ್ನದೇ ಆದ ವಿಶ್ಲೇಷಣೆಯ ಆಧಾರದ ಮೇಲೆ, ಟ್ರಾಯ್ 'ಭಾರತೀಯ ಟೆಲಿಕಾಂ ನೆಟ್ವರ್ಕ್ಗಳಲ್ಲಿ ಕರೆ ಹೆಸರು ಪ್ರಸ್ತುತಿ (ಸಿಎನ್ಎಪಿ) ಸೇವೆಯನ್ನು ಪರಿಚಯಿಸುವುದು' ಕುರಿತು ತನ್ನ ಶಿಫಾರಸುಗಳನ್ನು ಅಂತಿಮಗೊಳಿಸಿದೆ. ಭಾರತೀಯ ಟೆಲಿಕಾಂ ನೆಟ್ವರ್ಕ್ನಲ್ಲಿ ಕಾಲಿಂಗ್ ನೇಮ್ ಪ್ರೆಸೆಂಟೇಶನ್ (ಸಿಎನ್ಎಪಿ) ಪೂರಕ ಸೇವೆಯನ್ನು ಪರಿಚಯಿಸಬೇಕು.- ಕರೆ ಲೈನ್ ಗುರುತಿಸುವಿಕೆಯನ್ನು (ಸಿಎಲ್ಐ) ಕಾಲಕಾಲಕ್ಕೆ ಪರವಾನಗಿದಾರರು ದೂರವಾಣಿ ಸಂಖ್ಯೆ ಮತ್ತು ಕರೆ ಹೆಸರು (ಸಿಎನ್ಎಂ) ಅಥವಾ ಐಟಿಯು ಶಿಫಾರಸು / ಐಪಿ ವಿಳಾಸ ಇ.164 ಗೆ ಅನುಗುಣವಾಗಿ ನಿರ್ದಿಷ್ಟಪಡಿಸಿದ ಯಾವುದೇ ಇತರ ಗುರುತಿನ ಪ್ರಕಾರ ಕರೆ ಮಾಡುವ / ಮೂಲ ಗ್ರಾಹಕರ ಗುರುತಾಗಿ ಮರುವ್ಯಾಖ್ಯಾನಿಸಬೇಕು. - ಎಲ್ಲಾ ಸೇವಾ ಪೂರೈಕೆದಾರರು ತಮ್ಮ ದೂರವಾಣಿ ಗ್ರಾಹಕರಿಗೆ ಅವರ ಕೋರಿಕೆಯ ಮೇರೆಗೆ ಕರೆ ಮಾಡುವ ಹೆಸರು ಪ್ರಸ್ತುತಿ (ಸಿಎನ್ ಎಪಿ) ಪೂರಕ ಸೇವೆಯನ್ನು ಒದಗಿಸಬೇಕು.



# ಪಂಜಾಬ್ ಪ್ರಾಂತ್ಯದ ಮೊದಲ ಮಹಿಳಾ ಮುಖ್ಯಮಂತ್ರಿಯಾದ ಮರಿಯಂ ನವಾಝ್

**ಇಸ್ಲಾಮಾಬಾದ್:** ಪಾಕಿಸ್ತಾನದ ಪ್ರಾಂತದ ಪ್ರಪ್ರಥಮ ಮಹಿಳಾ ಮುಖ್ಯಮಂತ್ರಿ ಎಂಬ ಹೆಗ್ಗಳಿಗೆ ಮಾಜಿ ಪ್ರಧಾನಿ, ಪಿಎಂಎಲ್-ಎನ್ ಮುಖಂಡ ನವಾಝ್ ಷರೀಫ್ ಪುತ್ರಿ ಮರ್ಯಮ್ ನವಾಝ್ ಪಾತ್ರವಾಗಿದ್ದಾರೆ. ಪಂಜಾಬ್ ಪ್ರಾಂತದ ಮುಖ್ಯಮಂತ್ರಿಯಾಗಿ ಮರ್ಯಮ್ ಆಯ್ಕೆಗೊಂಡಿದ್ದು, ಇದು ದೇಶದ ಪ್ರತಿಯೊಬ್ಬ ಮಹಿಳೆಗೂ ಸಂದ ಗೌರವವಾಗಿದೆ ಎಂದವರು ಪ್ರತಿಕ್ರಿಯಿಸಿದ್ದಾರೆ. ಪಿಎಂಎಲ್-ಎನ್ ಉಪಾಧ್ಯಕ್ಷೆಯಾಗಿರುವ 50 ವರ್ಷದ ಮರ್ಯಮ್ ಹಾಗೂ ಮಾಜಿ ಪ್ರಧಾನಿ ಇಮ್ರಾನ್ಖಾನ್ ಅವರ ಪಿಟಿಐ ಪಕ್ಷದ ಬೆಂಬಲ ಪಡೆದ ಸುನ್ನಿ ಇತ್ತೆಹಾದ್ ಕೌನ್ಸಿಲ್ (ಎಸ್ಐಸಿ)ನ ರಾಣಾ ಅಫ್ತಾಬ್ ಪಂಜಾಬ್ ಸಿಎಂ ಹುದ್ದೆಗೆ ಕಣದಲ್ಲಿದ್ದರು. ಆದರೆ ಮತದಾನಕ್ಕೂ ಮುನ್ನ ವಿಧಾನಸಭೆಯನ್ನು ಉದ್ದೇಶಿಸಿ ಮಾತನಾಡಲು ರಾಣಾ ಅಫ್ತಾಬ್ಗೆ ಅವಕಾಶ ನಿರಾಕರಿಸಿರುವುದನ್ನು ಖಂಡಿಸಿ ಎಸ್ ಐಸಿ ಹಾಗೂ ಪಿಟಿಐ ಸದಸ್ಯರ ಸಭಾತ್ಯಾಗ ಮಾಡಿದರು. 327 ಸದಸ್ಯ ಬಲದ ವಿಧಾನಸಭೆಯಲ್ಲಿ 220 ಮತಗಳನ್ನು ಪಡೆದ ಮರ್ಯಮ್ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವುದಾಗಿ ಹೊಸದಾಗಿ ನೇಮಕಗೊಂಡಿದ್ದ ಸ್ಪೀಕರ್ ಮಲಿಕ್ ಅಹ್ಮದ್ ಖಾನ್ ಘೋಷಿಸಿದರು. ದ್ವೇಷ ರಾಜಕಾರಣ ನಡೆಸದೆ ಪ್ರಾಂತದ ಅಭಿವೃದ್ಧಿಗೆ ಆದ್ಯತೆ ನೀಡುವುದಾಗಿ ಮರ್ಯಮ್ ಹೇಳಿದ್ದಾರೆ.

# ಫೆಲೆಸ್ತೀನ್‌ನಲ್ಲಿ ದ್ವಿರಾಷ್ಟ್ರ ಸೂತ್ರ ಅನಿವಾರ್ಯ: ಒಐಸಿ ಪ್ರತಿಪಾದನೆ

**ಹೇಗ್:** ಫೆಲೆಸ್ತೀನಿಯನ್ ಪ್ರದೇಶಗಳನ್ನು ಇಸ್ರೇಲ್ ಆಕ್ರಮಿಸಿಕೊಂಡಿರುವ ಕಾನೂನುಬದ್ಧತೆಗೆ ಸಂಬಂಧಿಸಿ ವಿಶ್ವಸಂಸ್ಥೆಯ ಅತ್ಯುನ್ನತ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಯ ಅಂತಿಮ ದಿನವಾದ ಸೋಮವಾರ ಟರ್ಕಿ, ಅರಬ್ ಲೀಗ್, ಒಐಸಿ(ಇಸ್ಲಾಮಿಕ್ ಸಹಕಾರ ಸಂಘಟನೆ) ಮತ್ತು ಆಫ್ರಿಕನ್ ಯೂನಿಯನ್ ಪ್ರತಿನಿಧಿಗಳು ತಮ್ಮ ವಾದ ಮಂಡಿಸಿದ್ದಾರೆ.ಪ್ರಾದೇಶಿಕ ಶಾಂತಿಗೆ ದ್ವಿರಾಷ್ಟ್ರ ಪರಿಹಾರ ಅನಿವಾರ್ಯ ಎಂದು ಒಐಸಿ ಪ್ರತಿಪಾದಿಸಿತು. 'ಫೆಲೆಸ್ತೀನ್ನಲ್ಲಿ ದ್ವಿರಾಷ್ಟ್ರ ಪರಿಹಾರವನ್ನು ಆಧರಿಸಿದ ನ್ಯಾಯಸಮ್ಮತ, ಶಾಶ್ವತ ಮತ್ತು ಸಮಗ್ರ ಶಾಂತಿಯು ಈ ಪ್ರದೇಶದ ಎಲ್ಲಾ ಜನರ ಸುರಕ್ಷತೆ ಮತ್ತು ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಪುನರಾವರ್ತಿತ ಹಿಂಸಾಚಾರದಿಂದ ಅವರನ್ನು ರಕ್ಷಿಸುವ ಏಕೈಕ ಮಾರ್ಗವಾಗಿದೆ' ಎಂದು ಒಐಸಿ



ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ತಹಾ ಹೇಳಿದ್ದಾರೆ. 'ಇಸ್ರೇಲ್ಗೆ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಯಾವುದೇ ದೇಶ ರಫ್ತು ಮಾಡಬಾರದು. ಈ ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ಸೇನೆ ಮತ್ತು ಪಶ್ಚಿಮದಂಡೆಯಲ್ಲಿ ಇಸ್ರೇಲ್ನ ವಸಾಹತುಗಳಲ್ಲಿ ನೆಲೆಸಿರುವವರು ಫೆಲೆಸ್ತೀನ್ ಜನರ ವಿರುದ್ಧ ಬಳಸಬಹುದು' ಎಂದವರು ಆಗ್ರಹಿಸಿದರು.

# ಅಂಟಾರ್ಕ್ಟಿಕಾ: ಮೊದಲ ಬಾರಿಗೆ ಹಕ್ಕಿ ಜ್ವರ ಪತ್ತೆ

**ಅಂಟಾರ್ಕ್ಟಿಕಾ:** ಅಂಟಾರ್ಕ್ಟಿಕಾದ ಮುಖ್ಯ ಭೂಮಿಯಲ್ಲಿ ಹೆಚ್ಚು ರೋಗಕಾರಕ ಏವಿಯನ್ ಇನ್ಫ್ಲುಯೆನ್ಸ ವೈರಸ್ (ಎಚ್ಪಿಎಐವಿ) ಇರುವಿಕೆಯನ್ನು ವಿಜ್ಞಾನಿಗಳು ದೃಢಪಡಿಸಿದ್ದಾರೆ ಮತ್ತು 'ಪರಿಸರ ವಿಪತ್ತು' ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಹಕ್ಕಿ ಜ್ವರ ಎಂದು ಕರೆಯಲ್ಪಡುವ ಎಚ್ಪಿಎಐವಿ ಪಕ್ಷಿಗಳಲ್ಲಿ ಗಂಭೀರ ಕಾಯಿಲೆಯನ್ನು ಉಂಟುಮಾಡುತ್ತದೆ.

ಹೈಯರ್ ಕೌನ್ಸಿಲ್ ಫಾರ್ ಸೈಂಟಿಫಿಕ್ ರಿಸರ್ಚ್ (ಸಿಎಸ್ಐಸಿ) ನ ಸೆವೆರೊ ಒಚೋವಾ ಮಾಲಿಕ್ಯುಲರ್ ಬಯಾಲಜಿ ಸೆಂಟರ್ನ ಸಂಶೋಧಕರು ವೈರಸ್ ಮಾನವರಿಗೆ ಹರಡುವುದನ್ನು ತಡೆಯಲು ಕೆಲಸ ಮಾಡುತ್ತಿದ್ದಾರೆ.

ಸಿಎಸ್ಐಸಿಯ ಆಂಟೋನಿಯೊ ಅಲ್ಕಾಮಿ ನೇತೃತ್ವದ ವಿಜ್ಞಾನಿಗಳ ಗುಂಪು ಸತ್ತ ಸ್ಕುವಾಗಳ ಎರಡು ಮಾದರಿಗಳಲ್ಲಿ ವೈರಸ್ ಅನ್ನು ಕಂಡುಹಿಡಿದಿದೆ ಎಂದು ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ ಸಚಿವಾಲಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಅಲ್ಕಾಮಿ ಸ್ಪ್ಯಾನಿಷ್ ಅಂಟಾರ್ಕ್ಟಿಕ್ ನೆಲೆ ''ಗೇಬ್ರಿಯಲ್ ಡಿ ಕ್ಯಾಸ್ಟಿಲ್ಲಾ''ದಲ್ಲಿ ಕೆಲಸ ಮಾಡುತ್ತಾರೆ. ಫೆಬ್ರವರಿ 24 ರಂದು ವೈರಸ್ ಇರುವಿಕೆಯನ್ನು ಅವರು ದೃಢಪಡಿಸಿದರು.

ಜನರಿಗೆ ವೈರಸ್ ಹರಡುವುದನ್ನು ತಪ್ಪಿಸಲು ಗರಿಷ್ಠ ರಕ್ಷಣಾತ್ಮಕ ಕ್ರಮಗಳನ್ನು ಬಳಸಿಕೊಂಡು ಮಾದರಿಗಳನ್ನು ಪಡೆಯಲಾಗಿದೆ.



# ಫೆಲೆಸ್ತೀನ್ ಪ್ರಧಾನಿ ಹುದ್ದೆಗೆ ಮೊಹಮ್ಮದ್ ಶ್ತಾಯೆಹ್ ರಾಜೀನಾಮೆ

**ಗಾಜಾ:** ಫೆಲೆಸ್ತೀನ್ ಪಶ್ಚಿಮ ದಂಡೆಯ ಕೆಲವು ಭಾಗಗಳನ್ನು ಆಳುತ್ತಿರುವ ತಮ್ಮ ಸರ್ಕಾರ ರಾಜೀನಾಮೆ ನೀಡುತ್ತಿದೆ ಮತ್ತು ರಾಜೀನಾಮೆಯನ್ನು ಪ್ಯಾಲೆಸ್ತೀನ್ ಅಧ್ಯಕ್ಷ ಮತ್ತು ಪ್ಯಾಲೆಸ್ತೀನ್ ರಾಷ್ಟ್ರೀಯ ಪ್ರಾಧಿಕಾರದ (ಪಿಎನ್ಎ) ಮುಖ್ಯಸ್ಥ ಮಹಮೂದ್ ಅಬ್ಬಾಸ್ ಅವರಿಗೆ ಸಲ್ಲಿಸಿದೆ ಎಂದು ಫೆಲೆಸ್ತೀನ್ ಪ್ರಧಾನಿ ಮೊಹಮ್ಮದ್ ಶ್ತಾಯೆಹ್ ಹೇಳಿದ್ದಾರೆ.ಈ ಕ್ರಮವು ಯುಎಸ್ ಬೆಂಬಲಿತ ಸುಧಾರಣೆಗಳಿಗೆ ಬಾಗಿಲು ತೆರೆಯುತ್ತದೆ ಎಂದು ಅಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ.

ನಾನು ಸರ್ಕಾರದ ರಾಜೀನಾಮೆಯನ್ನು ಶ್ರೀ ಅಧ್ಯಕ್ಷ (ಮಹಮೂದ್ ಅಬ್ಬಾಸ್) ಅವರಿಗೆ ಸಲ್ಲಿಸುತ್ತೇನೆ ಎಂದು ಶ್ತಾಯೆಹ್ ಹೇಳಿದರು. ಗಾಜಾ ಪಟ್ಟಿಯ ವಿರುದ್ಧದ ಆಕ್ರಮಣ ಮತ್ತು ಪಶ್ಚಿಮ ದಂಡೆ ಮತ್ತು ಜೆರುಸಲೇಂನಲ್ಲಿನ ಉಲ್ಬಣಕ್ಕೆ ಸಂಬಂಧಿಸಿದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಂಡಿರೋದಾಗಿ ಶ್ತಾಯೆಹ್ ಹೇಳಿದರು. ಮುಂದಿನ ಹಂತ ಮತ್ತು ಅದರ ಸವಾಲುಗಳಿಗೆ ಗಾಝಾ ಪಟ್ಟಿಯಲ್ಲಿನ ಹೊಸ ವಾಸ್ತವತೆಯನ್ನು ಗಣನೆಗೆ ತೆಗೆದುಕೊಳ್ಳುವ ಹೊಸ ಸರ್ಕಾರಿ ಮತ್ತು ರಾಜಕೀಯ ಕ್ರಮಗಳ ಅಗತ್ಯವಿದೆ ಎಂದು ಅವರು ಹೇಳಿದರು.



Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಪುನೀತ್ ಹುಟ್ಟುಹಬ್ಬಕ್ಕೆ 'ಜಾಕಿ' ಸಿನಿಮಾ ಮರುಬಿಡುಗಡೆ



ಪುನೀತ್ ರಾಜ್ ಕುಮಾರ್ ಹುಟ್ಟು ಹಬ್ಬಕ್ಕೆ ಈಗಿನಿಂದಲೇ ತಯಾರಿ ಮಾಡಿಕೊಳ್ಳಲಾಗುತ್ತಿದೆ. ಮಾರ್ಚ್ 17ಕ್ಕೆ ಅಪ್ಪು ಹುಟ್ಟು ಹಬ್ಬ. ಅಂದು ಅವರ ನಟನೆಯ ಜಾಕಿ ಸಿನಿಮಾವನ್ನು ಮರು ಬಿಡುಗಡೆ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ದುನಿಯಾ ಸೂರಿ ನಿರ್ದೇಶನದಲ್ಲಿ ಈ ಸಿನಿಮಾ ಮೂಡಿ ಬಂದಿದ್ದು, ಬಾಕ್ಸ್ ಆಫೀಸಿನಲ್ಲಿ ಸೂಪರ್ ಹಿಟ್ ಚಿತ್ರ ಎಂದು ದಾಖಲಾಗಿದೆ. ಚಿತ್ರದ ಕಥೆ, ಅಪ್ಪು ಡಾನ್ಸ್, ಹಾಡು ಹಾಗೂ ಸಾಹಸ ಸನ್ನಿವೇಶಗಳಿಂದ ಜಾಕಿ ಸಿನಿಮಾ ಗಮನ ಸೆಳೆದಿತ್ತು. ವಿಚಿತ್ರ ವೇಷಗಳನ್ನೂ ಈ ಸಿನಿಮಾದಲ್ಲಿ ಪುನೀತ್ ರಾಜ್ ಕುಮಾರ್ ಹಾಕಿದ್ದರು. ಪಾರ್ವತಮ್ಮ ರಾಜ್ ಕುಮಾರ್ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದರು. ಅಪ್ಪು ಜೊತೆ ಭಾವನಾ ನಾಯಕಿಯಾಗಿ ನಟಿಸಿದ್ದರು.

ಜಾಕಿ ಚಿತ್ರವನ್ನು ಮತ್ತಷ್ಟು ಅಪ್ ಗ್ರೇಡ್ ಮಾಡಿ ಈ ಬಾರಿ ಥಿಯೇಟರ್ ಗೆ ತರಲಾಗುತ್ತಿದೆ. ಸೌಂಡ್, ರೆಸ್ಯುಲೇಷನ್ ಮತ್ತಷ್ಟು ಹೆಚ್ಚಿಸಲಾಗಿದೆಯಂತೆ. ಇನ್ನಷ್ಟು ಕಲರ್ ಫುಲ್ ನೊಂದಿಗೆ ಜಾಕಿ ಸಿನಿಮಾವನ್ನು ನೋಡಬಹುದಾಗಿದೆಯಂತೆ.

ಬರೀ ಸಿನಿಮಾ ಮಾತ್ರವಲ್ಲ ಎಂದಿನಂತೆ ಅವರ ಅಭಿಮಾನಿಗಳು ಅನ್ನ ಸಂತರ್ಪಣೆ, ಕಣ್ಣುದಾನ, ರಕ್ತದಾನದಂತಹ ಶಿಬಿರಗಳನ್ನು ಅಪ್ಪು ಸಮಾಧಿ ಬಳಿ ಮಾಡಲು ರೆಡಿ ಆಗುತ್ತಿದ್ದಾರೆ. ಅಂದು ಯುವ ಸಿನಿಮಾದ ಇವೆಂಟ್ ಕೂಡ ಇರಲಿದೆ.



# ಏನು ಚಿಕ್ಕದು? ಯಾರದು ದೊಡ್ಡದು ಅಂತ ಹೇಳಲೇ ಇಲ್ಲ ಉಪೇಂದ್ರ

ಅಂದುಕೊಂಡಂತೆ ಆಗಿದ್ದರೆ ಇಂದು ಉಪೇಂದ್ರ ನಟನೆಯ ಯುಐ ಸಿನಿಮಾದ ಚೀಪ್ ಚೀಪ್ ಸಾಂಗ್ ರಿಲೀಸ್ ಆಗಬೇಕಿತ್ತು. ಮೊನ್ನೆಯಷ್ಟೇ ಈ ಹಾಡಿನ ಸಣ್ಣ ತುಣುಕೊಂದನ್ನು ಹಾಕಿ ಸಾಕಷ್ಟು ಕುತೂಹಲ ಮೂಡಿಸಿದ್ದರು ಉಪೇಂದ್ರ. ಪೂರ್ಣ ಪ್ರಮಾಣದ ಹಾಡನ್ನು ಫೆಬ್ರವರಿ 26ರಂದು ರಿಲೀಸ್ ಮಾಡುವುದಾಗಿ ತಿಳಿಸಿದ್ದರು. ಆದರೆ, ರಿಲೀಸ್ ಮಾಡದೇ ಇರುವ ಮೂಲಕ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದ್ದಾರೆ.

ಇವತ್ತು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿರೋ ಉಪ್ಪಿ, 'ಚೀಪ್ ಚೀಪ್ ಏನದು? ದೊಡ್ಡದು.. ಚಿಕ್ಕದು.. ಯಾರದ್ದು? ಇದು ಬಹಳ ಸೂಕ್ಷ್ಮವಾದ ವಿಷಯ. ಯಾರದ್ದು ಚಿಕ್ಕದು, ಯಾರದ್ದು ದೊಡ್ಡದು? ಎಂಬ ವಿಷಯ ಬಹಿರಂಗವಾದರೆ ಅದಾಗಿ ಹೋಗುತ್ತದೆ. ಅದಾಗಿ ಹೋಗುತ್ತದೆ ಎಂದು ಏನು? ಏನು ಅದು? ಅದು ಏನಾಗುತ್ತದೆ? ಏನಾಗುತ್ತದೆ ಎಂಥು ಮಾರ್ಚ್ 4ನೇ ತಾರೀಕು ಇನ್ನೊಂದು ಹಾಡಿನ ಲಿರಿಕಲ್ ವಿಡಿಯೋ ಬಿಡುಗಡೆಯಾದಾಗ ಗೊತ್ತಾಗುತ್ತದೆ' ಎಂದು ಬರೆದುಕೊಂಡಿದ್ದಾರೆ ಉಪ್ಪಿ.

ಈ ಹಿಂದೆ ಕ್ಷಮಿಸಿ.. ಹಾಡಿನ ಅರ್ಥವನ್ನು ನೀವು ಹೇಗೆ ಬೇಕಾದರೂ ಕಲ್ಪಿಸಿಕೊಳ್ಳಿ ಎನ್ನುತ್ತಾ ''ಚೀಪ್.. ಚೀಪ್.. ಎಲ್ಲಾ ಚೀಪ್ ಚೀಪ್.. ನಂದು ತುಂಬಾ ದೊಡ್ಡದು. ಅವನಿಗಿಂತ ನಿಂದು ಚಿಕ್ಕದು. ನಿಂದು ತುಂಬಾ ಚಿಕ್ಕದು, ಇವನಿಗಿಂತ ಅವಂದು ದೊಡ್ಡು..'' ಥೋ.. ಇದು ಡಬಲ್ ಮೀನಿಂಗ್ ಹಾಡಾ ಅಥವಾ ಗೂಢಾರ್ಥ ಏನಾದರೂ ಇದೆಯಾ ಗೊತ್ತಿಲ್ಲ. ಒಟ್ನಲ್ಲಿ ನಟ, ನಿರ್ದೇಶಕ ಉಪೇಂದ್ರ ಪ್ರೇಮಿಗಳ ದಿನದಂದು ತಮ್ಮ ಯುಐ ಸಿನಿಮಾದ ಹಾಡಿನ ತುಣುಕೊಂದನ್ನು ಬಿಡುಗಡೆ ಮಾಡಿ ಮತ್ತೆ ಮೆದುಳಿಗೆ ಹುಳು ಬಿಟ್ಟದ್ದರು. ಹಾಡಿನ ಈ ಸಣ್ಣ ತುಣುಕು ಸೋಷಿಯಲ್ ಮೀಡಿಯಾದಲ್ಲಿ ಟ್ರೆಂಡ್ ಕ್ರಿಯೇಟ್ ಮಾಡಿತ್ತು.




ಈ ಹಿಂದೆ ಯುಐ ಸಿನಿಮಾದ ಟೀಸರ್ ರಿಲೀಸ್ ಆಗಿತ್ತು. ಅದಕ್ಕೆ ಅದ್ಭುತ ರೆಸ್ಪಾನ್ಸ್ ಸಿಕ್ಕಿತ್ತು. ರಿಲೀಸ್ ಆದ ಕೆಲವೇ ಗಂಟೆಗಳಲ್ಲಿ 23 ಮಿಲಿಯನ್ ವೀಕ್ಷಣೆ ಪಡೆದುಕೊಂಡಿತ್ತು. ಈ ಖುಷಿಯಲ್ಲಿ ಉಪ್ಪಿ ಸೋಷಿಯಲ್ ಮೀಡಿಯಾ ಮೂಲಕ ಹಂಚಿಕೊಂಡಿದ್ದರು. ವೀಕ್ಷಣೆಗೆ ಧನ್ಯವಾದಗಳನ್ನೂ ಹೇಳಿದ್ದರು.

ಟೀಸರ್ ನೋಡಿದ ಉಪ್ಪಿ ಅಭಿಮಾನಿಗಳು ಸಾಕಷ್ಟು ತಲೆಕೆಡಿಸಿಕೊಂಡಿದ್ದರು. ಜೊತೆಗೆ ನೂರಾರು ಪ್ರಶ್ನೆಗಳನ್ನು ಉಪ್ಪಿಗೆ ಕೇಳಿದ್ದರು. ಯಾರೇ ಪ್ರಶ್ನೆ ಮಾಡಿದರೂ ಉಪೇಂದ್ರ ಮಾತ್ರ ಟೀಸರ್ ನೋಡಿ, ಅಲ್ಲೇ ಉತ್ತರವಿದೆ ಎನ್ನುವಂತೆ ಮೌನ ತಾಳಿದ್ದರು. ಇದೀಗ ಹಾಡಿನಿಂದಲೂ ಅಂಥದ್ದೇ ಉತ್ತರ ಬಂದಿದೆ. ವಿಚಿತ್ರವಾದ ಮಾತುಗಳನ್ನು ಹಾಕಿ ಮೌನಕ್ಕೆ ಜಾರಿದ್ದಾರೆ ಉಪೇಂದ್ರ.

# ನೀನೇನು ಸಲಿಂಗಕಾಮಿಯೇ?



**ಕಿರಾತಕಿ ಹುಡುಗಿ ಮೇಲೆ ಅನುಮಾನ ಪಟ್ಟ ಫ್ಯಾನ್ಸ್**

ಯಶ್ ನಟನೆಯ ಕಿರಾತಕ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿರುವ ಓವಿಯಾ, ಲೈಂಗಿಕ ವಿಷಯದಲ್ಲಿ ಸಿಕ್ಕಾಪಟ್ಟೆ ಟ್ರೋಲ್ ಆಗುತ್ತಿದ್ದಾರೆ. ಈ ಹಿಂದೆ ಅವರು ವೇಶ್ಯಾವಾಟಿಕೆಯನ್ನು ಕಾನೂನುಬದ್ಧ ಮಾಡಿ ಎಂದು ಸ್ಟೇಟ್ ಮೆಂಟ್ ಕೊಟ್ಟಿದ್ದರು. ಅದು ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು. ಈಗ ಸೆಕ್ಸ್ ಬಗ್ಗೆ ಮಾತನಾಡಿದ್ದಾರೆ ಓವಿಯಾ. ಈ ಕಾರಣದಿಂದಾಗಿ ಅಭಿಮಾನಿಯೊಬ್ಬ ಬೆಂಕಿ ರೀತಿಯ ಪ್ರಶ್ನೆ ಕೇಳಿದ್ದಾನೆ.

ಕೇವಲ ಸೆಕ್ಸ್‌ಗಾಗಿ ನಾನು ಮದುವೆ ಆಗಲಾರೆ. ಸೆಕ್ಸ್ ಮಾಡುವುದಕ್ಕಾಗಿ ಹುಡುಗನನ್ನು ಮದುವೆಯಾಗಿ ಜೀವನ ಪೂರ್ತಿ ಅವನ ಸೇವೆ ಮಾಡಲಾರೆ ಎಂದು ಸಂದರ್ಶನದಲ್ಲಿ ಹೇಳಿಕೆ ನೀಡಿದ್ದಾರೆ. ಈ ಮಾತು ಕೇಳಿದ ಅನೇಕರು 'ನೀನೇನು ಸಲಿಂಗಕಾಮಿಯೇ?' ಎಂದು ಪ್ರಶ್ನೆ ಮಾಡಿದ್ದಾರೆ.

ನಟಿ ಓವಿಯಾ ಅಚ್ಚರಿಯ ಹೇಳಿಕೆ ಕೊಡುತ್ತಲೇ ಸುದ್ದಿ ಆಗುತ್ತಿದ್ದಾರೆ. ಅವರು ಆಡಿದ ಮಾತುಗಳು ಸಾಕಷ್ಟು ಚರ್ಚೆಗೂ ಕಾರಣವಾಗಿವೆ. ಕೆಲವರು ಓವಿಯಾ ಮಾತಿಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದರೆ, ಇನ್ನೂ ಕೆಲವರು ನೆಗೆಟಿವ್ ಕಾಮೆಂಟ್ ಮಾಡಿದ್ದಾರೆ.

ಮೊನ್ನೆಯಷ್ಟೇ ಅವರು ಅತ್ಯಾಚಾರ ಕುರಿತಂತೆ ಮಾತನಾಡಿ 'ವೇಶ್ಯಾವಾಟಿಕೆಯನ್ನು ಕಾನೂನುಬದ್ಧ ಮಾಡಿದರೆ, ಅತ್ಯಾಚಾರವನ್ನು ತಡೆಗಟ್ಟಬಹುದು. ಅತ್ಯಾಚಾರಕ್ಕೆ ಕಡಿವಾಣ ಹಾಕಲು ಇದೊಂದು ಸೂಕ್ತ ಮಾರ್ಗ' ಎಂದು ಅವರು ಅಭಿಪ್ರಾಯ ಪಟ್ಟಿದ್ದರು. ಜೊತೆಗೆ ಲೈಂಗಿಕ ಶಿಕ್ಷಣದ ಬಗ್ಗೆಯೂ ಮಾತನಾಡಿದ್ದರು. ಎಲ್ಲರಿಗೂ ಲೈಂಗಿಕ ಆಸಕ್ತಿಗಳು ಇವೆ. ಅದನ್ನು ಅದುಮಿಟ್ಟುಕೊಂಡು ಮುಖವಾಡ ಹಾಕಿಕೊಂಡು ಬದುಕುತ್ತಿದ್ದಾರೆ. ಮನುಷ್ಯರಿಗೆ ಸಹಜವಾದದ್ದು ಇರಲೇಬೇಕು ಎಂದು ಓವಿಯಾ ಮಾತನಾಡಿದ್ದರು. ಈ ಮಾತುಗಳು ಸೋಷಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಕೂಡ ಆಗಿತ್ತು. ಓವಿಯಾಗೆ ಅವಕಾಶಗಳು ಕಡಿಮೆ ಆಗುತ್ತಿವೆ. ಹಾಗಾಗಿ ಈ ರೀತಿ ಮಾತನಾಡಿ ಪ್ರಚಾರ ತೆಗೆದುಕೊಳ್ಳುತ್ತಿದ್ದಾರೆ ಎಂದು ಕೆಲವರು ಕಾಮೆಂಟ್ ಮಾಡಿದ್ದರು.

**ಹ್ಯಾಟ್ರಿಕ್ ಗೆಲುವಿನೊಂದಿಗೆ ಭಾರತಕ್ಕೆ ಸರಣಿ ಜಯ**

# ಧ್ರುವ್ ಜುರೆಲ್, ಗಿಲ್ ತಾಳ್ಮೆಯ ಜೊತೆಯಾಟ







ರೋಹಿತ್ ಶರ್ಮಾ, ಶುಭಮನ್ ಗಿಲ್ ಜವಾಬ್ದಾರಿಯುತ ಅರ್ಧಶತಕ, ಧ್ರುವ್ ಜುರೆಲ್ ತಾಳ್ಮೆಯ ಬ್ಯಾಟಿಂಗ್ ನೆರವಿನಿಂದ ಭಾರತ, ಇಂಗ್ಲೆಂಡ್ ವಿರುದ್ಧದ 4ನೇ ಟೆಸ್ಟ್ ಪಂದ್ಯದಲ್ಲಿ 5 ವಿಕೆಟ್‌ಗಳ ಜಯ ಸಾಧಿಸಿದೆ. ಈ ಮೂಲಕ ಹ್ಯಾಟ್ರಿಕ್ ಗೆಲುವಿನೊಂದಿಗೆ ಸರಣಿಯನ್ನು ಕೈವಶ ಮಾಡಿಕೊಂಡಿದೆ. 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 3-1 ಅಂತರದಲ್ಲಿ ಭಾರತ ಮುನ್ನಡೆ ಸಾಧಿಸಿದೆ.

ಇಲ್ಲಿನ ಜೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ 4ನೇ ಟೆಸ್ಟ್ ಪಂದ್ಯದಲ್ಲಿ ಗೆಲುವಿಗೆ 192 ರನ್‌ಗಳ ಗುರಿ ಪಡೆದ ಭಾರತ 61 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 192 ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿದೆ. 40 ರನ್‌ಗಳಿಂದ 4ನೇ ದಿನದ ಕ್ರೀಸ್ ಆರಂಭಿಸಿದ ಭಾರತ, ಆಂಗ್ಲರ ಸ್ಪಿನ್ ದಾಳಿಯ ನಡುವೆಯೂ ಗೆಲುವು ಸಾಧಿಸಿದೆ. ಈ ಮೂಲಕ ಭಾರತವು ತವರಿನಲ್ಲಿ ನಡೆದ ಸತತ 17 ಟೆಸ್ಟ್ ಸರಣಿಗಳನ್ನು ಗೆದ್ದ ವಿಶೇಷ ಸಾಧನೆ ಮಾಡಿದಂತಾಗಿದೆ.

4ನೇ ದಿನದಾಟದಲ್ಲಿ ಸ್ಫೋಟಕ ಆರಂಭ ಪಡೆಯುವ ನಿರೀಕ್ಷೆಯಲ್ಲಿದ್ದ ಭಾರತ 120 ರನ್‌ಗಳಿಗೆ 5 ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ನಾಯಕ ರೋಹಿತ್ ಶರ್ಮಾ ಹಾಗೂ ಯಶಸ್ವಿ ಜೈಸ್ವಾಲ್ ಜೋಡಿ ಮೊದಲ ವಿಕೆಟ್‌ಗೆ 84 ರನ್‌ಗಳ ಜೊತೆಯಾಟ ನೀಡಿದ್ದರು. ಆದ್ರೆ, 37 ರನ್ ಗಳಿಸಿ ಯಶಸ್ವಿ ಜೈಸ್ವಾಲ್ ಔಟಾಗುತ್ತಿದ್ದಂತೆ, ಅರ್ಧಶತಕ ಗಳಿಸಿದ್ದ ರೋಹಿತ್, ರಜತ್ ಪಾಟೀದಾರ್, ರವೀಂದ್ರ ಜಡೇಜಾ ಹಾಗೂ ಸರ್ಫರಾಜ್ ಖಾನ್ ಬ್ಯಾಕ್ ಟು ಬ್ಯಾಕ್ ವಿಕೆಟ್ ಒಪ್ಪಿಸಿ ಹೊರ ನಡೆದರು. ಜಡೇಜಾ 33 ಎಸೆತಗಳಲ್ಲಿ ಕೇವಲ 4 ರನ್ ಗಳಿಸಿದ್ರೆ, ಪಾಟೀದಾರ್ ಹಾಗೂ ಸರ್ಫರಾಜ್ ಖಾನ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ಮರಳಿದರು. ಈ ವೇಳೆ ಶುಭಮನ್ ಗಿಲ್ ಜೊತೆಗೂಡಿದ ಧ್ರುವ್ ಜುರೆಲ್ ಉತ್ತಮ ಇನ್ನಿಂಗ್ಸ್ ಕಟ್ಟಿದರು. ಇದರಿಂದ ಗೆಲುವು ಭಾರತದತ್ತ ವಾಲಿತು.

ಅಂತಿಮವಾಗಿ ಶುಭಮನ್ ಗಿಲ್ 124 ಎಸೆತಗಳಲ್ಲಿ ಎರಡು ಭರ್ಜರಿ ಸಿಕ್ಸರ್‌ಗಳೊಂದಿಗೆ 52 ರನ್ ಗಳಿಸಿದ್ರೆ, ಧ್ರುವ್ ಜುರೆಲ್ 77 ಎಸೆತಗಳಲ್ಲಿ 39 ರನ್ ಗಳಿಸಿ ಅಜೇಯರಾಗುಳಿದರು.

ಭಾರತ ಮತ್ತು ಇಂಗ್ಲೆಂಡ್ ನಡುವೆ ನಡೆಯುತ್ತಿರುವ 4ನೇ ಟೆಸ್ಟ್ ಪಂದ್ಯದ 3ನೇ ದಿನದಾಟದಲ್ಲಿ ಇಂಗ್ಲೆಂಡ್ 145 ರನ್‌ಗಳಿಗೆ ಆಲೌಟ್ ಆಗಿ ತೀವ್ರ ಮುಖಭಂಗ ಅನುಭವಿಸಿತ್ತು. ಟೀಂ ಇಂಡಿಯಾ ಸ್ಪಿನ್ನರ್ಸ್ ಅಶ್ವಿನ್, ಕುಲ್ದೀಪ್ ಯಾದವ್ ಸ್ಪಿನ್ ಮೋಡಿಗೆ ತತ್ತರಿಸಿದ ಇಂಗ್ಲೆಂಡ್ ಅರ್ಧದಿನದಲ್ಲೇ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಇದರಿಂದ 192 ರನ್‌ಗಳ ಗುರಿ ಪಡೆದಿದ್ದ ಭಾರತ 8 ಓವರ್‌ಗಳಲ್ಲಿ ಯಾವುದೇ ವಿಕೆಟ್ ನಷ್ಟವಿಲ್ಲದೇ 40 ರನ್ ಕಲೆಹಾಕಿತ್ತು.

**ಕ್ರಾವ್ಲಿ ಅರ್ಧಶತಕ:** 3ನೇ ದಿನ 46 ರನ್‌ಗಳ ಮುನ್ನಡೆಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡ ಉತ್ತಮ ಪ್ರದರ್ಶನ ನೀಡುವ ಉತ್ಸಾಹದಲ್ಲಿತ್ತು. ಆದ್ರೆ ಟೀಂ ಇಂಡಿಯಾ ಸ್ಪಿನ್ನರ್‌ಗಳ ದಾಳಿಗೆ ತುತ್ತಾಗಿ ತೀವ್ರ ಹಿನ್ನಡೆ ಅನುಭವಿಸಿತು. ಇಂಗ್ಲೆಂಡ್ ಪರ ಝೂಕ್ ಕ್ರಾವ್ಲಿ 60 ರನ್ (91 ಎಸೆತ, 7 ಬೌಂಡರಿ), ಜಾನಿ ಬೈರ್ಸ್ಟೋವ್ 30 ರನ್ ಗಳಿಸಿದ್ದು ಬಿಟ್ಟರೆ, ಉಳಿದೆಲ್ಲರೂ ತರಗೆಲೆಗಳಂತೆ ಉದುರಿದರು, ಇದರಿಂದ ಇಂಗ್ಲೆಂಡ್ 145 ರನ್‌ಗಳಿಗೆ ಆಲೌಟ್ ಆಯಿತು.

ಆಂಗ್ಲರ ಈ ಉತ್ಸಾಹಕ್ಕೆ ಟೀಂ ಇಂಡಿಯಾ ಸ್ಪಿನ್ನರ್‌ಗಳು ಬ್ರೇಕ್ ಹಾಕಿದರು. ರವಿಚಂದ್ರನ್ ಅಶ್ವಿನ್ 15.5 ಓವರ್‌ಗಳಲ್ಲಿ 51 ರನ್ ಬಿಟುಕೊಟ್ಟ ಅಶ್ವಿನ್ 5 ವಿಕೆಟ್ ಕಿತ್ತರೆ, ಕುಲ್ದೀಪ್ ಯಾದವ್ 4 ವಿಕೆಟ್ ಹಾಗೂ ರವೀಂದ್ರ ಜಡೇಜಾ 1 ವಿಕೆಟ್ ಪಡೆದು ಮುಂಚಿದರು.

**ಜುರೆಲ್, ಜೈಸ್ವಾಲ್ ಬ್ಯಾಟಿಂಗ್ ಬಲ:** 4ನೇ ಟೆಸ್ಟ್ ಪಂದ್ಯದ 2ನೇ ದಿನದಾಟದಲ್ಲಿ ದಿನದಾಟದಲ್ಲಿ ಯಶಸ್ವಿ ಜೈಸ್ವಾಲ್ ಹೊರತುಪಡಿಸಿ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಕಳಪೆ ಪ್ರದರ್ಶನ ತೋರಿದ್ದರು. ಇದರಿಂದ ಸಂಕಷ್ಟಕ್ಕೆ ಸಿಲುಕಿದ್ದ ಟೀಮ್ ಇಂಡಿಯಾ, ಪಂದ್ಯದ ಮೂರನೇ ದಿನದಾಟದಲ್ಲಿ ದಿಟ್ಟ ಹೋರಾಟ ನಡೆಸಿತು. ವಿಕೆಟ್ ಕೀಪರ್ ಬ್ಯಾಟ್ಸ್ಮನ್ ಧ್ರುವ್ ಜುರೆಲ್ ಅವರ 90 ರನ್‌ಗಳ ಬಲದಿಂದ ಭಾರತ ತಂಡ ಚೇತರಿಸಿಕೊಂಡಿತು. ಇದರೊಂದಿಗೆ ಕುಲ್ದೀಪ್ ಯಾದವ್ 131 ಎಸೆತಗಳಲ್ಲಿ 28 ರನ್‌ಗಳ ಕೊಡುಗೆ ನೀಡಿದರು. ಇದರಿಂದ ಭಾರತ 300 ರನ್‌ಗಳ ಗಡಿ ದಾಟುವಲ್ಲಿ ಯಶಸ್ವಿಯಾಯಿತು. ಮೊದಲ ಇನ್ನಿಂಗ್ಸ್‌ನಲ್ಲಿ 307 ರನ್ ಕಲೆಹಾಕಿ, ಕೇವಲ 46 ರನ್‌ಗಳ ಹಿನ್ನಡೆ ಅನುಭವಿಸಿತ್ತು.

ಭಾರತ ತಂಡದ ಯುವ ವಿಕೆಟ್‌ಕೀಪರ್ ಬ್ಯಾಟ್ಸ್ಮನ್ ಧ್ರುವ್ ಜುರೆಲ್ ಬ್ಯಾಟಿಂಗ್‌ಗೆ ಬಂದಾಗ ತಂಡ 200ಕ್ಕೂ ಹೆಚ್ಚು ರನ್‌ಗಳ ಹಿನ್ನಡೆ ಅನುಭವಿಸುವ ಭೀತಿಯಲ್ಲಿತ್ತು. 177 ರನ್‌ಗಳಿಗೆ ಭಾರತ ತಂಡ ತನ್ನ 7ನೇ ವಿಕೆಟ್ ಕಳೆದುಕೊಂಡು ಅಪಾಯಕ್ಕೆ ಸಿಲುಕಿತ್ತು. ಈ ಹಂತದಲ್ಲಿ ಕುಲ್ದೀಪ್ ಯಾದವ್ ಜೊತೆಗೂಡಿ ಅಮೋಘ ಪ್ರದರ್ಶನ ನೀಡಿದ ಧ್ರುವ್ ಜುರೆಲ್, 8ನೇ ವಿಕೆಟ್‌ಗೆ 202 ಎಸೆತಗಳಲ್ಲಿ 76 ರನ್‌ಗಳ ಜೊತೆಯಾಟ ನೀಡಿದರು. ನಂತರ ಬಂದ ಆಕಾಶ್ ದೀಪ್ ಜೊತೆಗೂಡಿಯೂ 40 ರನ್‌ಗಳ ಜೊತೆಯಾಟ ಕಟ್ಟಿ ತಂಡದ ಮೊತ್ತವನ್ನು 300 ರನ್‌ಗಳ ಗಡಿ ದಾಟಿಸಿದರು. ಈನಡುವೆ ಜುರೆಲ್ ಶತಕ ವಂಚಿತರಾದರು.

**ಶೋಯೆಬ್ ಬಶೀರ್ ಚೊಚ್ಚಲ 5 ವಿಕೆಟ್ ಸಾಧನೆ:** ಇಂಗ್ಲೆಂಡ್ ತಂಡದ ಪರ ಯುವ ಆಫ್ ಸ್ಪಿನ್ನರ್ ಶೋಯೆಬ್ ಬಶೀರ್ ಚೊಚ್ಚಲ 5 ವಿಕೆಟ್ ಸಾಧನೆಯೊಂದಿಗೆ ಮಿಂಚಿದರು. 20 ವರ್ಷದ ಯುವ ಬೌಲರ್ ಒಟ್ಟಾರೆ 44 ಓವರ್‌ಗಳನ್ನು ಎಸೆದು 119ರನ್ ಬಿಟ್ಟುಕೊಟ್ಟು 5 ವಿಕೆಟ್ ಪಡೆದು ಮಿಂಚಿದರು. ತಮ್ಮ ಟೆಸ್ಟ್ ಕ್ರಿಕೆಟ್ ವೃತ್ತಿಬದುಕಿನ 2ನೇ ಪಂದ್ಯದಲ್ಲೇ 5 ವಿಕೆಟ್ ಸಾಧನೆಯೊಂದಿಗೆ ಗಮನ ಸೆಳೆದರು. ಇದರೊಂದಿಗೆ ಟಾಮ್ ಹಾರ್ಟ್ಲೀ 3 ವಿಕೆಟ್, ಜೇಮ್ಸ್ ಆಂಡರ್ಸನ್ 2 ವಿಕೆಟ್ ಕಿತ್ತರು. ಮೊದಲ ಇನಿಂಗ್ಸ್‌ನಲ್ಲಿ 353 ರನ್ ಗಳಿಸಿದ್ದ ಇಂಗ್ಲೆಂಡ್ ತಂಡ 46 ರನ್‌ಗಳ ಮುನ್ನಡೆಯೊಂದಿಗೆ 2ನೇ ಇನಿಂಗ್ಸ್ ಆರಂಭಿಸಿತ್ತು.

# ರಾಜ್ಯದ ಜನತೆ ಕಾಂಗ್ರೆಸ್ ಸರ್ಕಾರನ ತೆಗೆಯಬೇಕು

**ಕೋಲಾರ:**ರಾಜ್ಯದ ಜನತೆ ಕಾಂಗ್ರೆಸ್‌ನ ಕೆಟ್ಟ ಸರ್ಕಾರ ತೆಗೆಯಬೇಕಿದೆ. ಜಾಹೀರಾತು ಕೊಡೋಕೆ ಬಜೆಟ್ ನಲ್ಲಿ 200 ಕೋಟಿ ಅನುದಾನ ಪಡೆಯುತ್ತಾರೆ. ರೈತರು ನಷ್ಟದಲ್ಲಿದ್ದಾರೆ, ಪರಿಹಾರ ಕೊಡೋಕೆ ಹಣ ಇಲ್ಲ. ಜಾಹೀರಾತು ಕೊಡೋಕೆ 200 ಕೋಟಿ ಹಣ ಪಾಸ್ ಮಾಡ್ತಾರೆ. ಜಾಹೀರಾತಿನಲ್ಲಿ ಇರುವ ಕಲರ್ ಫೋಟೋ ನೋಡಿದ್ರೆ ಹೇಸಿಗೆ ಆಗುತ್ತೆ. ಸರ್ಕಾರ ಯಾರಪ್ಪನ ದುಡ್ಡಲ್ಲಿ ಜಾಹೀರಾತು ಕೊಡ್ತಿದ್ದಾರೆ ಎಂದು ಕೋಲಾರದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕಾಂಗ್ರೆಸ್ ವಿರುದ್ಧ ಕಿಡಿಕಾರಿದ್ದಾರೆ.

ಲೋಕಸಭಾ ಚುನಾವಣೆ ದಿನಾಂಕ ಸಮೀಪಿಸುತ್ತಿರುವ ಹಿನ್ನೆಲೆ ಜೆಡಿಎಸ್ ಭರ್ಜರಿ ತಯಾರಿ ಶುರು ಮಾಡಿದೆ. ಈ ನಡುವೆ ಇಂದು ಮಾಜಿ ಸಿಎಂ ಹೆಚ್‌ಡಿ ಕುಮಾರಸ್ವಾಮಿಯವರು ಕೋಲಾರದಲ್ಲಿ ನಡೆಯುತ್ತಿರುವ ಮುಳಬಾಗಿಲು ಜೆಡಿಎಸ್ ಶಾಸಕ ಸಮೃದ್ಧಿ ಮಂಜುನಾಥ್ ಅವರ ಸಿರಿಸಮೃದ್ಧಿ ಗೋಲ್ಡ್ ಪ್ಯಾಲೇಸ್ ಎರಡನೇ ಶಾಖೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ. ಈ ವೇಳೆ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಇದೇ ವೇಳೆ ಲೋಕಸಭಾ ಚುನಾವಣೆಯಲ್ಲಿ ಮುಳಬಾಗಿಲು ಶಾಸಕ ಸಮೃದ್ಧಿ ಮಂಜುನಾಥ್ ಹೆಸರು ಸಹ ಕೇಳಿ ಬರ್ತಿದೆ. ಈ ಬಾರಿ ಕೋಲಾರ ಮೈತ್ರಿ ಅಭ್ಯರ್ಥಿ ಗೆಲ್ಲಲಿದ್ದಾರೆ. ಸೀಟ್ ಹಂಚಿಕೆ ಬಗ್ಗೆ ಅಧಿಕೃತವಾಗಿ ಘೋಷಣೆ ಆಗಬೇಕು. ಸಂಸದ ಮುನಿಸ್ವಾಮಿ ಸಹ ನಿರೀಕ್ಷೆ ಇಟ್ಟಿದ್ದಾರೆ, ಅಂತಿಮವಾಗಿ ಪಟ್ಟಿ ಬರಲಿದೆ. ಮುನಿಸ್ವಾಮಿ ಸಹ ಸಮರ್ಥರಿದ್ದಾರೆ ಎಂದರು.



ರಾಜ್ಯ ಕಾಂಗ್ರೆಸ್‌ನ ಕೆಟ್ಟ ಸರ್ಕಾರ ತೆಗೀಬೇಕಾಗಿದೆ. ಬಜೆಟ್‌ನಲ್ಲಿ ಜಾಹೀರಾತು ಕೊಡೋಕೆ 200 ಕೋಟಿ ಅನುದಾನ ಪಡೆಯುತ್ತಾರೆ. ರೈತರು ನಷ್ಟದಲ್ಲಿದ್ದಾರೆ, ಪರಿಹಾರ ಕೊಡೋಕೆ ಹಣ ಇಲ್ಲ. ರೈತರಿಗೆ ತಲಾ 2 ಸಾವಿರ ಕೊಡ್ತೀವಿ ಅಂತ 620 ಕೋಟಿ ಮೀಸಲಿಟ್ಟಿದ್ದಾರೆ. ಅದರಲ್ಲಿ 75 ಪರ್ಸೆಂಟ್ ಕೇಂದ್ರದ್ದು, 25 ಪರ್ಸೆಂಟ್ ರಾಜ್ಯದ್ದು. ಜಾಹೀರಾತು ಕೊಡೋಕೆ 200 ಕೋಟಿ ಹಣ ಪಾಸ್ ಮಾಡ್ತಾರೆ. ಜಾಹಿರಾತಿನಲ್ಲಿ ಇರುವ ಕಲರ್ ಫೋಟೋ ನೋಡಿದ್ರೆ ಹೇಸಿಗೆ ಆಗುತ್ತೆ. ಸರ್ಕಾರ ಯಾರಪ್ಪನ ದುಡ್ಡಲ್ಲಿ ಜಾಹೀರಾತು ಕೊಡ್ತಿದ್ದಾರೆ. ರೈತರ ಸಾಲಮನ್ನ ಮಾಡಿದ ಬಳಿಕ ನಾನು ಜಾಹೀರಾತು ಎಲ್ಲೂ ಹಾಕಿಲ್ಲ, ಗೃಹಲಕ್ಷ್ಮಿ ಯೋಜನೆಯಲ್ಲಿ ಬೇಕಾದ್ರೆ ಇನ್ನು 2 ಸಾವಿರ ಹೆಚ್ಚಿಗೆ ಕೊಡಲಿ. ಸರ್ಕಾರ ಗ್ಯಾರಂಟಿ ಬಗ್ಗೆ ಕನವರಿಕೆ ಮಾಡಿ ಖಜಾನೆ ಖಾಲಿ ಮಾಡಿಕೊಳ್ತಿದ್ದಾರೆ ಎಂದು ಹೆಚ್‌ಡಿಕೆ ವಾಗ್ದಾಳಿ ನಡೆಸಿದರು.

ಜೆಡಿಎಸ್ ಶಾಸಕರು ಕಾಂಗ್ರೆಸ್‌ಗೆ ಹೋಗ್ತಾ ಇರ್ತಾರೆ, ಬರ್ತಾರೆ ತಲೆ ಏಕೆ ಕೆಡಿಸಿಕೊಳ್ಳಬೇಕು. ಡಿಕೆಶಿಗೆ ಹಣ ಹಾಗೂ ಧಮ್ಕಿ ನಲ್ಲಿ ಪೈಪೋಟಿ ಕೊಡೋಕೆ ಆಗುತ್ತಾ? ಯಾರಾದ್ರೂ ಶಾಸಕರು ಆ ರೀತಿ ಹೇಳಿದ್ದಾರ? ಸೆಟಲ್ಮೆಂಟ್ ರಾಜಕಾರಣದಲ್ಲಿ ಪೈಪೋಟಿ ಕೊಡೋಕೆ ನಮ್ಮಿಂದ ಆಗಲ್ಲ. ಗಿಫ್ಟ್ ಹಂಚೋರು ಎಲ್ಲಾ ಬಿಟ್ಟಿದ್ದಾರೆ ಅದರ ಬಗ್ಗೆ ಮಾತಾಡಲ್ಲ. ಚೈನಾದಿಂದ ಖರೀದಿ ಮಾಡಿರುವ ಕುಕ್ಕರ್ ಹಾಗೂ ಡೈನಿಂಗ್ ಸೆಟ್ ಹಂಚುತ್ತಿದ್ದಾರೆ. ಕಾಂಗ್ರೆಸ್ ನವ್ರು 55 ವರ್ಷಗಳಿಂದ ಇದೆ ಪರಿಸ್ಥಿತಿಯಲ್ಲಿಟ್ಟಿದ್ದಾರೆ. ಲೂಟಿ ಹೊಡೆದಿರುವ ಗಿಫ್ಟ್ ಹಂಚಲಾಗ್ತಿದೆ. ಒಳ್ಳೆ ಕೆಲಸ ಮಾಡಿದ್ರೆ ಗಿಫ್ಟ್ ಕೊಡ್ಬೇಕಾ? ಎಂದು ಡಿಸಿಎಂ ಡಿಕೆ ಶಿವಕುಮಾರ್‌ಗೆ ಹೆಚ್‌ಡಿ ಕುಮಾರಸ್ವಾಮಿ ಪ್ರಶ್ನೆ ಮಾಡಿದರು.

ಇನ್ನು ಕೋಲಾರಕ್ಕೆ ಎತ್ತಿನಹೊಳೆ ಯೋಜನೆ ಕೊಡುವ ವಿಚಾರ ಸಂಬಂಧ ಮಾತನಾಡಿದ ಹೆಚ್‌ಡಿಕೆ, ಸಿಎಂ ಸಿದ್ದರಾಮಯ್ಯ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗೆ ಟೋಪಿ ಹಾಕಿದ್ದಾರೆ. ಅರಸಿಕೆರಿಗೆ ಕೊಡೋಕೆ ಇನ್ನು 2 ವರ್ಷ ಆಗುತ್ತೆ ಅಂತ ಸಿಎಂ ಹೇಳ್ತಿದ್ದಾರೆ ಎಂದರು.

# ಕಾವೇರಿ ನಿವಾಸದಲ್ಲಿ ಸಿಎಂ ಭೇಟಿಯಾದ ಜನಾರ್ದನ ರೆಡ್ಡಿ

**ಬೆಂಗಳೂರು:** ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಮಂಗಳವಾರ ನಡೆಯಲಿರುವ ಚುನಾವಣೆ ರಂಗೇರುತ್ತಿದ್ದು, ಕೆಆರ್‌ಪಿಪಿ ಶಾಸಕ ಜನಾರ್ದನ ರೆಡ್ಡಿಯವರು ದಿಢೀರ್ ಆಗಿ ಸಿಎಂ ಸಿದ್ದರಾಮಯ್ಯ ನಿವಾಸಕ್ಕೆ ತೆರಳಿ ಮಾತುಕತೆ ನಡೆಸಿದ್ದಾರೆ. ಚುನಾವಣೆ ಹೊತ್ತಿನಲ್ಲಿ ಜನಾರ್ದನ ರೆಡ್ಡಿಯವರ ನಡೆ ಕುತೂಹಲ ಮೂಡಿಸಿದೆ.

ಸೋಮವಾರ ಬೆಳಗ್ಗೆ ಕಾವೇರಿ ನಿವಾಸಕ್ಕೆ ಜನಾರ್ದನ ರೆಡ್ಡಿಯರು ತೆರಳಿದ್ದು, ಸಿಎಂ ಸಿದ್ದರಾಮಯ್ಯ ಅವರ ಜೊತೆ ಮಾತುಕತೆ ನಡೆಸಿದ್ದಾರೆ. ರಾಜ್ಯಸಭಾ ಚುನಾವಣೆಯಲ್ಲಿ ಅವರು ಕಾಂಗ್ರೆಸ್‌ಗೆ ಬೆಂಬಲ ಕೊಡುವ ಸಾಧ್ಯತೆ ಇದೆ. ಸಿಎಂ ಸಿದ್ದರಾಮಯ್ಯ ನಿವಾಸದಲ್ಲಿ ಭೇಟಿ ವೇಳೆ ಡಿಸಿಎಂ ಡಿಕೆಶಿ, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಉಪಸ್ಥಿತರಿದ್ದರು.

ಈ ಬಗ್ಗೆ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಸಿಎಂ ಸಿದ್ದರಾಮಯ್ಯ ಭೇಟಿ ಮಾಡಿದ್ದೇನೆ. ಆನೆಗುಂದಿ ಉತ್ಸವಕ್ಕೆ ಆಹ್ವಾನ ನೀಡಲು ಹೋಗಿದ್ದೆ. ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕುವಂತೆ ಎಲ್ಲರೂ ಮನವಿ ಮಾಡಿದ್ದಾರೆ. ರಾಜ್ಯಸಭಾ ಚುನಾವಣೆಯಲ್ಲಿ ಯಾರಿಗೆ ಮತ ಹಾಕಬೇಕು ಎಂಬ ಬಗ್ಗೆ ಇನ್ನು ತೀರ್ಮಾನ ಮಾಡಿಲ್ಲ ಎಂದು ಹೇಳಿ ಕುತೂಹಲ ಹುಟ್ಟುಹಾಕಿದ್ದಾರೆ.



Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com